ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 1 | ಸಂಚಿಕೆ 24 | ಆಗಸ್ಟ್ 26, 1979 | 40 ಪೈಸೆ

ಅನಿಶ್ಚಿತತೆಗೆ ಕೊನೆ

ಜನತಾಪಕ್ಷದ ಬಹುಮತವು ಹೋಗಿ, ಮೊರಾರ್ಜಿದೇಸಾಯಿ ಸರಕಾರದ ಪತನವಾಗಿ ಉದ್ಭವಿಸಿದ್ದ ಅನಿಶ್ಚಿತತೆಯು ಚರಣಸಿಂಗರ ಸರಕಾರ ರಚನೆಯಾಗುವುದರ ಮೂಲಕ ಒಮ್ಮೆಗೆ ಕೊನೆಯಾದಂತಾಯಿತೆಂದು ಬಹಳ ಜನ ಅಭಿಪ್ರಾಯಪಟ್ಟರು. ಆದರೆ ಐಕ್ಯರಂಗ ಪತ್ರಿಕೆಯ ಸಂಪಾದಕೀಯದಲ್ಲಿ ಹೇಳಿದ್ದಂತೆ ಚರಣಸಿಂಗರ ಸರಕಾರವು ಲೋಕಸಭೆಯಲ್ಲಿ ವಿಶ್ವಾಸ ಮತ ಪಡೆದು ಸರಿಯಾಗಿ ಸ್ಥಾಪನೆಯಾಗುವುದಕ್ಕೆ ಮೊದಲೇ ಪತನವಾಗುವಂತಾಯಿತು. ಇದರಿಂದಲಾಗಿ ಉಂಟಾದ ಇನ್ನೂ ಹೆಚ್ಚಿನ ಅನಿಶ್ಚಿತತೆ ಮತ್ತು ಗೊಂದಲವನ್ನು ಹೋಗಲಾಡಿಸುವುದಕ್ಕೆ ಒಂದೇ ದಾರಿಯೆಂದರೆ ಮತ್ತೆ ಜನತೆಯಿಂದ ಮತ ಯಾಚಿಸುವುದೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಅಭಿಪ್ರಾಯಪಟ್ಟಿತು. ಜನತಾಪಕ್ಷ ಒಂದರ ಹೊರತು ಉಳಿದೆಲ್ಲ ಪ್ರಮುಖ ರಾಜಕೀಯ ಪಕ್ಷಗಳೂ ಇದೇ ಅಭಿಪ್ರಾಯಕ್ಕೆ ಬಂದಿದ್ದುವು. ಆಗಸ್ಟ್ 22 ರಂದು ರಾಷ್ಟ್ರಪತಿಯವರು ಲೋಕಸಭೆಯನ್ನು ರದ್ದುಗೊಳಿಸಿ, ಮಧ್ಯಂತರ ಚುನಾವಣೆ ನಡೆಸುವ ಆಜ್ಞೆಯನ್ನು ಹೊರಡಿಸಿದರು. ಘಟನೆಯ ಬಗ್ಗೆ ಅಭ್ಯಸಿಸಿದ ಪಂಡಿತರುಗಳು ಒಬ್ಬೊಬ್ಬರು

ಸಂಪಾದಕೀಯ

ಒಂದೊಂದು ರೀತಿಯ ಪ್ರತಿಕ್ರಿಯೆ ವ್ಯಕ್ತಪಡಿಸಿರುವರಾದರೂ, ರಾಷ್ಟ್ರಪತಿಯವರ ಈ ಕ್ರಮವು ಸಮಯೋಚಿತವೂ ಸರಿಯೂ ಆಗಿದೆ.

ಆಳವಾಗುತ್ತಿರುವ ಆರ್ಥಿಕ ಬಿಕ್ಕಟ್ಟು, ಮತ್ತು ಪರಿಣಾಮವಾಗಿ ಬೆಳೆಯುತ್ತಲಿರುವ ಜನತೆಯ ಅತೃಪ್ತಿ, ಪಾರ್ಲಿಮೆಂಟರಿ ಪ್ರಜಾಪ್ರಭುತ್ವದಲ್ಲಿ ಬೆಳೆದು ಬರುತ್ತಲಿರುವ ರಾಜಕೀಯ ಅಸ್ಥಿರತೆ, ಅಧಿಕಾರವನ್ನು ಪಡೆಯುವುದಕ್ಕಾಗಿ ಬಂಡವಾಳಶಾಹಿ ಪಕ್ಷ ಮತ್ತು ಗುಂಪುಗಳೊಳಗೆ ನಡೆಯುತ್ತಲಿರುವ ತಿಕ್ಕಾಟ-ಇವೆಲ್ಲ ಕಾರಣಗಳಿಂದಲಾಗಿ ಭೂಮಾಲಕ-ಬಂಡವಾಳಶಾಹಿ ವರ್ಗಗಳ ಪ್ರತಿನಿಧಿ ಪಕ್ಷಗಳು ಇಂದು ನಾಲ್ಕು ಮುಖ್ಯ ವಿಭಾಗಗಳಾಗಿವೆ. ಅಮೇರಿಕಾ, ಇಂಗ್ಲೇಂಡುಗಳಲ್ಲಿನಂತೆ ಇಲ್ಲೂ ದ್ವಿಪಕ್ಷೀಯ ಪದ್ಧತಿಯು ಬರುವುದೆಂದು ಆಶಿಸಿದ್ದ ಆಳುವವರ್ಗದ ಪ್ರತಿನಿಧಿಗಳ ನಿರೀಕ್ಷೆಯನ್ನು ಇದು ಸುಳ್ಳುಮಾಡಿದೆ. ಜನಸಂಘದ ಹತೋಟಿಯ ಜನತಾ, ಜನತಾ(ಎಸ್), ಇಂದಿರಾಕಾಂಗ್ರೆಸ್ ಮತ್ತು ಸ್ವರಣಸಿಂಗ್ ಕಾಂಗ್ರೆಸ್‌ಗಳು ದೇಶದ ಸುಮಾರು ಶೇಕಡಾ 75 ಜನತೆಯನ್ನು ತಮ್ಮ ಪ್ರಭಾವದಲ್ಲಿರಿಸಿಕೊಂಡಿವೆ. ಇನ್ನು ಬೇರೆ ಬೇರೆ ರಾಜ್ಯಗಳಲ್ಲಿ

[ಕಡೆಯ ಪುಟ ನೋಡಿ]

ಮಧ್ಯಂತರ ಚುನಾವಣೆಯೊಂದೆ ದಾರಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್ ಬ್ಯೂರೋವು ಆಗಸ್ಟ್ 20ರಂದು ಈ ಕೆಳಗಿನ ಹೇಳಿಕೆಯನ್ನಿತ್ತಿದೆ:

"ಇಂದಿರಾ ಕಾಂಗ್ರೆಸ್ ನೇತೃತ್ವದ ಸರ್ವಾಧಿಕಾರಿ ಶಕ್ತಿಗಳನ್ನು ಅಥವಾ ರಾಷ್ಟ್ರೀಯ ಸ್ವಯಂಸೇವಕ ಸಂಘಟನೆಯ ನೇತೃತ್ವದ ಕೋಮುಶಕ್ತಿಗಳನ್ನು ಅವಲಂಭಿಸಿಕೊಂಡು ರಚಿತವಾಗುವ ಯಾವುದೇ ಸರಕಾರದ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ನಿರ್ಧಿಷ್ಟ ಮತ್ತು ಸ್ಪಷ್ಟ ನಿಲುಮೆಯನ್ನು ತೆಗೆದುಕೊಂಡಿದೆ. ಚರಣಸಿಂಗರ ಸರಕಾರವು ಇಂದಿರಾ ಕಾಂಗ್ರೆಸ್ಸನ್ನು ಅವಲಂಭಿಸಿಕೊಳ್ಳುವುದನ್ನು ತಪ್ಪಿಸುವಂತೆ ಮಾಡಲು ನಾವು ಪ್ರಯತ್ನ ಪಟ್ಟೆವು. ಈ ಪ್ರಯತ್ನದಲ್ಲಿ ಒಂದು ರೀತಿಯಲ್ಲಿ ನಾವು ಯಶಸ್ಸನ್ನು ಪಡೆದೆವು; ಚರಣಸಿಂಗರು ಇಂದಿರಾ ಕಾಂಗ್ರೆಸ್ಸಿನ ಬೆಂಬಲವನ್ನು ತಿರಸ್ಕರಿಸಿದರು.

ಇಂದಿನ ಪರಿಸ್ಥಿತಿಯಲ್ಲಿ ಜನತಾ ಪಕ್ಷವು ತನ್ನ ಸರಕಾರವನ್ನು ರಚಿಸಲು ಪ್ರಯತ್ನಿಸುವುದು ಎಂದರೆ ಸದಸ್ಯರುಗಳನ್ನು ಕೊಂಡುಕೊಂಡು, ಎಂತಾದರೂ ಆರ್. ಎಸ್. ಎಸ್. ನಿಯಂತ್ರಣದ ಸರಕಾರವನ್ನು ಸ್ಥಾಪಿಸುವುದಾಗಿದೆ. ಅನಿಶ್ಚಿತತೆ, ಗೊಂದಲಗಳನ್ನು ಇನ್ನೂ ಹೆಚ್ಚು ಮಾಡಿದಂತಾಗುವುದು. ಆದುದರಿಂದ ಈ ಪರಿಸ್ಥಿತಿಯನ್ನು ಎದುರಿಸಬೇಕಾದರೆ ಜನತೆಯಿಂದ ಮತ್ತೆ ಮತ ಯಾಚಿಸಬೇಕಾಗಿರುವುದೊಂದೇ ದಾರಿ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಅಭಿಪ್ರಾಯಪಡುತ್ತದೆ."

ರಾಷ್ಟ್ರಪತಿ ಸಂಜೀವರೆಡ್ಡಿಯವರು ಆಗಸ್ಟ್ 22 ರಂದು ಲೋಕಸಭೆಯನ್ನು ರದ್ದುಗೊಳಿಸಿ, ಮಧ್ಯಂತರ ಚುನಾವಣೆ ನಡೆಸಲು ಆಜ್ಞೆ ಇತ್ತಿರುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಸ್ವಾಗತಿಸಿದೆ. ರಾಷ್ಟ್ರಪತಿಯವರ ಈ ಕ್ರಮವನ್ನು ಜನತಾಪಕ್ಷ ಪ್ರಮುಖ ಒಂದರ ಹೊರತು ಉಳಿದೆಲ್ಲಾ ಪಕ್ಷಗಳೂ ಸ್ವಾಗತಿಸಿವೆ.

●

"ಘಟನೆಗಳು ನಿಲುಮೆಯನ್ನು ಸಮರ್ಥಿಸಿವೆ"

ಚರಣಸಿಂಗರ ಸರ್ಕಾರಕ್ಕೆ ಸಿಪಿಐ(ಎಂ) ಬೆಂಬಲವಿತ್ತುದೇಕೆ?

ಮೊರಾರ್ಜಿ ದೇಸಾಯಿಯವರ ಸರಕಾರವು ಪತನವಾಗಿ, ಜನತಾಪಕ್ಷಕ್ಕಿದ್ದ ಬಹುಮತ ಕಳೆದುಹೋದ ಹಿನ್ನೆಲೆಯಲ್ಲಿ ರಾಷ್ಟ್ರಪತಿಯವರು ಶ್ರೀ ಚರಣಸಿಂಗರನ್ನು ಸರಕಾರ ಮಾಡಲು ಕರೆದರು; ಲೋಕಸಭೆಯಲ್ಲಿ ವಿಶ್ವಾಸ ಮತ ಪಡೆಯಲೂ ಸೂಚನೆ ಇತ್ತರು. 20-8-79 ರಂದು ವಿಶ್ವಾಸಮತ ಕೇಳುವ ಕಾರ್ಯಕ್ರಮ ನಿಗದಿಯಾಗಿತ್ತು. ರಾಜಕೀಯ ಅನಿಶ್ಚಿತತೆ, ಕೋಮು ಮತ್ತು ಸರ್ವಾಧಿಕಾರಿ ಶಕ್ತಿಗಳು ಸಂದರ್ಭವನ್ನು ಉಪಯೋಗಿಸಿಕೊಳ್ಳಲು ನಡೆಸುತ್ತಲಿದ್ದ ಕುತಂತ್ರಗಳ ಹಿನ್ನೆಲೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ತಾರೀಕು 15 ಮತ್ತು 16 ರಂದು ಸಭೆ ಸೇರಿ ಈ ಕೆಳಗಿನ ನಿರ್ಧಾರ ಮಾಡಿತ್ತು:

"ಅನಿಶ್ಚಿತತೆಯಿಂದ ಸೇರಿದ ಪಾರ್ಲಿಮೆಂಟಿನ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಜನತಾಪಕ್ಷವು ಮತ್ತೆ ಅಧಿಕಾರ ಪಡೆಯಲು ನಡೆಸುತ್ತಲಿರುವ ಪ್ರಯತ್ನ ಮತ್ತು ಚರಣಸಿಂಗರ ಮಂತ್ರಿಮಂಡಲದ ಮೇಲೆ ಪ್ರಭಾವ ಬೀರಲು ಇಂದಿರಾ ಕಾಂಗ್ರೆಸ್ ನಡೆಸುತ್ತಲಿರುವ ತಂತ್ರಗಳನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಗಮನಕ್ಕೆ ತೆಗೆದುಕೊಂಡಿದೆ. ಇಂದಿರಾ ಕಾಂಗ್ರೆಸ್‌ನ ಬೆಂಬಲವನ್ನು ಪಡೆದು ರಚಿತವಾಗುವ ಸರಕಾರದ ವಿರುದ್ಧ ಕೇಂದ್ರ ಸಮಿತಿಯು ತನ್ನ ನಿಲುವನ್ನು ಸ್ಪಷ್ಟಪಡಿಸಿತ್ತು. ಜನತಾ (ಎಸ್) ಮತ್ತು ಕಾಂಗ್ರೆಸ್ (ಎಸ್) ಕೂಟವು ತಮ್ಮ ಬೆಂಬಲಿಗರ ಪಟ್ಟಿಯಲ್ಲಿ ಇಂದಿರಾ ಕಾಂಗ್ರೆಸ್ಸನ್ನು ಸೇರಿಸಿರುವುದರಿಂದಾಗಿ, ಇಂದಿರಾಗಾಂಧಿಯ ಬೆಂಬಲವನ್ನು ಕೋರಿ, ರಚಿತವಾಗುವ ಮಂತ್ರಿಮಂಡಲಕ್ಕೆ ಬೆಂಬಲವೀಯದಿರಲು ಕೇಂದ್ರ ಸಮಿತಿಯು ನಿರ್ಧರಿಸಿತು.

ಆದರೆ ಜನತಾ (ಎಸ್) ಪಕ್ಷವು ಕೋಮುಶಕ್ತಿಗಳ ವಿರುದ್ಧ ನಡೆದ ಹೋರಾಟದಿಂದ ಜನ್ಮತಾಳಿತು ಎಂಬ ಅಭಿಪ್ರಾಯವನ್ನು ಕೇಂದ್ರ ಸಮಿತಿಯು ಮಾಡಿತು.

ಇಂದಿರಾ ಕಾಂಗ್ರೆಸ್ಸಿನ ಸರ್ವಾಧಿಕಾರಿ ಶಕ್ತಿಗಳು ತಮ್ಮ ಪರತತ್ತುಗಳನ್ನು ಒಪ್ಪುವಂತೆ ಮಾಡಲು ಚರಣಸಿಂಗರ ಮಂತ್ರಿಮಂಡಲದ ಮೇಲೆ ಒತ್ತಾಯವನ್ನು ಹೇರುವುದು ಕಂಡುಬಂದಿದೆ. ಆದರೆ ಇದೇ ಸಂದರ್ಭದಲ್ಲಿ ಚರಣಸಿಂಗರ ಕೂಟದಲ್ಲಿರುವ ಸರ್ವಾಧಿಕಾರ ವಿರೋಧಿ ಶಕ್ತಿಗಳು ವಿಶೇಷ ಕೋರ್ಟಿನ ವಿಚಾರದಲ್ಲಿ ಇಂದಿರಾಗಾಂಧಿ ಕಾಂಗ್ರೆಸ್ಸಿನೊಡನೆ ರಾಜಿ ಮಾಡುವ ಪ್ರಯತ್ನವನ್ನು ತಡೆಹಿಡಿದಿವೆ. ಈ ವಿಷಮ ಸಂದರ್ಭದಲ್ಲಿ, ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಚರಣಸಿಂಗರ ಮಂತ್ರಿಮಂಡಲಕ್ಕೆ ಎಲ್ಲಾ ರೀತಿಯ ಸಹಕಾರವನ್ನಿತ್ತು, ಇಂದಿರಾ ಕಾಂಗ್ರೆಸ್ಸನ್ನು ಅವಲಂಭಿಸಿಕೊಳ್ಳಬೇಕಾದ ಪರಿಸ್ಥಿತಿಯಿಂದ ದೂರಮಾಡಿಕೊಳ್ಳಲು ಮತ್ತು ಸರ್ವಾಧಿಕಾರ ಹಾಗು ಕೋಮುವಾದದ ವಿರುದ್ಧ ಹೋರಾಡಲು ಸಾಧ್ಯವಾಗುವಂತೆಯೂ ಮಾಡಬೇಕಾಗಿದೆ ಎಂದು ಕೇಂದ್ರ ಸಮಿತಿಯು ಅಭಿಪ್ರಾಯ ಪಡುತ್ತದೆ.

ಚರಣಸಿಂಗರ ಮಂತ್ರಿಮಂಡಲವು ಇನ್ನೂ ಇಂದಿರಾ ಕಾಂಗ್ರೆಸ್ಸನ್ನು ಅವಲಂಭಿಸಿಕೊಳ್ಳಬೇಕಾದ ಪರಿಸ್ಥಿತಿಯಿಂದ ಸಂಪೂರ್ಣ ಹೊರ ಬಂದಿಲ್ಲವಾದರೂ, ಮತ್ತು ಜನತೆಯ ಸಮಸ್ಯೆಗಳ ಬಗ್ಗೆ ನಿರ್ದಿಷ್ಟ ಧೋರಣೆಗಳನ್ನು ಸ್ಪಷ್ಟಪಡಿಸಬೇಕಿದ್ದರೂ, ಜನಸಂಘದ ಹತೋಟಿಯಲ್ಲಿರುವ ಜನತಾಪಕ್ಷವು ಮತ್ತೆ ಅಧಿಕಾರ ಪಡೆಯದಂತೆಯೂ, ಪರಿಸ್ಥಿತಿಯನ್ನು ಇಂದಿರಾ ಕಾಂಗ್ರೆಸ್ ದುರುಪಯೋಗಪಡಿಸದಂತೆಯೂ ತಡೆಹಿಡಿಯುವುದಕ್ಕಾಗಿ, ತಾನು ವಿರೋಧ ಪಕ್ಷವಾಗಿದ್ದುಕೊಂಡೇ ಮುಂದಿನ ವಿಶ್ವಾಸಮತ ಕೇಳುವ ಸಂದರ್ಭದಲ್ಲಿ ಚರಣಸಿಂಗರ ಮಂತ್ರಿಮಂಡಲಕ್ಕೆ ಬೆಂಬಲಕೊಡಲು ತೀರ್ಮಾನಿಸಿದೆ. ಕೋಮುವಾದ ಮತ್ತು ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಯಾವ ರೀತಿ ಹೋರಾಡುವುದು, ಜನತೆಗೆ ಸಂಬಂಧಿಸಿದಂತೆ ಸರ್ಕಾರವು ಯಾವ ಧೋರಣೆಗಳನ್ನು ಅನುಸರಿಸುವುದು ಎಂಬುದರ ಆಧಾರದಲ್ಲಿ ಪ್ರತಿಯೊಂದು ವಿಷಯದ ಮೇಲೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಸರಕಾರದ ಬಗ್ಗೆ ತನ್ನ ನಿಲುಮೆಯನ್ನು ತೆಗೆದುಕೊಳ್ಳುವುದು."

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಈ ನಿಲುಮೆಯಿಂದ, ಉಳಿದ ಕೆಲವು ಪಕ್ಷಗಳು ಮತ್ತು ಗುಂಪುಗಳು ಚರಣಸಿಂಗರ ಮಂತ್ರಿಮಂಡಲಕ್ಕೆ ಬೆಂಬಲವೀಯುವ ನಿರ್ಧಿಷ್ಟ ಧೋರಣೆಯನ್ನು ತಳೆಯುವುದು ಸಾಧ್ಯವಾಯಿತು. ಚರಣಸಿಂಗರು ಇಂದಿರಾ ಕಾಂಗ್ರೆಸ್ಸಿನ ಸರ್ವಾಧಿಕಾರಿ ಶಕ್ತಿಗಳಿಗೆ ಮಣಿಯದಿರುವಂತೆ ಮಾಡುವುದರಲ್ಲಿ ನಮ್ಮ ನಿಲುಮೆಯು ಪ್ರಮುಖ ಪಾತ್ರವನ್ನು ವಹಿಸಿತು.

●

ವರ್ಗ ಹೋರಾಟವೇ ಸ್ವಾತಂತ್ರ್ಯಕ್ಕೆ ದಾರಿ

—ಜಿ. ರಾಮಕೃಷ್ಣ

ನಮ್ಮ ದೇಶಕ್ಕೆ ರಾಜಕೀಯ ಸ್ವಾತಂತ್ರ ಬಂದಿದೆ. ಆದರೆ ಜನತೆಗೆ ಮಾತ್ರ ಆರ್ಥಿಕ ಸ್ವಾತಂತ್ರ ಬಾರದೆ ಅವರಿಗೆ ಸ್ವಾತಂತ್ರವೇ ಬಂದಿಲ್ಲವೆಂಬಂತ ಅನುಭವವಾಗಿದೆ ಎಂದು ವಿಶ್ವವಿದ್ಯಾಲಯಗಳ ಭೋದಕರ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಜನಪ್ರಿಯ ಬುದ್ಧಿಜೀವಿ ಜಿ. ರಾಮಕೃಷ್ಣ ಅವರು ನುಡಿದಿದ್ದಾರೆ.

ಬಂಡಾಯ ಸಂಘಟನಾ ಸಮಿತಿ ಮತ್ತು ದಲಿತ ಸಂಘರ್ಷ ಸಮಿತಿಯವರ ಸಂಯುಕ್ತ ಆಶ್ರಯದಲ್ಲಿ ಆಗಸ್ಟ್ 15 ರಂದು ಬೆಂಗಳೂರಿನಲ್ಲಿ ಏರ್ಪಡಿಸಲಾಗಿದ್ದ 'ಶೋಷಣೆ ವಿರೋಧಿ ದಿನ' ಸಮಾರಂಭದ ಮುಖ್ಯ ಅತಿಥಿಗಳಾಗಿ ಅವರು ಮಾತನಾಡುತ್ತಿದ್ದರು.

ಆರ್ಥಿಕ ಸ್ವಾತಂತ್ರ ನಮ್ಮ ಜನತೆಗೆ ಸಿಕ್ಕಲಿಲ್ಲ ಎಂದು ದುಃಖಃ ಪಡುವುದರಲ್ಲಿ ಮತ್ತು ಸ್ವಾತಂತ್ರ ದಿನವನ್ನು ಕಪ್ಪುದಿನವನ್ನಾಗಿ ಆಚರಿಸುವದರಲ್ಲಿ ಅರ್ಥವಿಲ್ಲ ಎಂದು ನಿಖರವಾಗಿ ನುಡಿದ ಅವರು, ಆರ್ಥಿಕ ಸ್ವಾತಂತ್ರಕ್ಕಾಗಿ ಜನತೆ ರೊಚ್ಚಿಗೇಳುವಂತೆ ಮಾಡುವಂತಹ ಸಿಟ್ಟು ನಿಮ್ಮಲ್ಲಿ ಬರಬೇಕು ಎಂದು ಬಂಡಾಯಗಾರರಿಗೆ ಮತ್ತು ದಲಿತರಿಗೆ ಜಿ.ಆರ್. ಕರೆ ನೀಡಿದರು.

ಸ್ವಾತಂತ್ರ ಯಾವತ್ತೂ ಸೀಮಿತ ಎಂದು ವಿವರಿಸಿದ ರಾಮಕೃಷ್ಣ ಅವರು ಪರಿಸ್ಥಿತಿಯ ಬದಲಾವಣೆಗೆ ಇರುವ ಸ್ವಾತಂತ್ರವನ್ನೆ ಉಪಯೋಗಿಸಿಕೊಂಡು ಹೆಚ್ಚು ಸ್ವಾತಂತ್ರಕ್ಕೆ - ನಿಜ ಸ್ವಾತಂತ್ರಕ್ಕೆ ಪ್ರಯತ್ನಿಸಿ ಎಂದು ಮನವಿ ಮಾಡಿದರು.

ಹಸಿರು ಕ್ರಾಂತಿ ಈ ದೇಶದಲ್ಲಿ ಆಗಿದ್ದರೂ ಆದೇಕೆ ಲಕ್ಷಾಂತರ ಮಂದಿ ಹಸಿವಿನಿಂದ ನರಳುತ್ತಿದ್ದಾರೆ ಎಂದು ಪ್ರಶ್ನಿಸಿದ ಜಿ.ಆರ್. ಅವರು ಶ್ರಮ ಆಧಾರಿತ ಸಾಮಾಜಿಕ ವಿತರಣೆಯು ನಮ್ಮಲ್ಲಿ ಇಲ್ಲದಿರುವುದೇ ಇದಕ್ಕೆ ಕಾರಣವೆಂದರು. ಸಮಾನತೆಯ ಆಧಾರದ ಮೇಲೆ ನಿಂತ ಬದುಕಿಗೆ ಬೇರೊಂದು ವ್ಯವಸ್ಥೆಯೇ ಬೇಕೆಂದ ರಾಮಕೃಷ್ಣ ಕೆಂಪುಕ್ರಾಂತಿಯಾಗದೆ ಹಸಿರುಕ್ರಾಂತಿಗೆ ಅರ್ಥವಿಲ್ಲ ಎಂದರು.

ಬ್ರಿಟಿಷರು ತೊಲಗಿದರು ಸುಲಿಗೆ ತೊಲಗಲಿಲ್ಲ:

ದೇಶಕ್ಕೆ ಸ್ವಾತಂತ್ರ ಬಂದ ದಿನ ಜೈಲಿನಲ್ಲಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿರಿಯ ನಾಯಕ ಎನ್. ಎಲ್. ಉಪಾಧ್ಯಾಯ ಅವರು ಈ ಸಂದರ್ಭದಲ್ಲಿ ಮಾತನಾಡಿ ಸ್ವಾತಂತ್ರಕ್ಕಾಗಿ ಹೋರಾಡಿ ಹುತಾತ್ಮರಾದ ಭಗತ್ ಸಿಂಗ್ ಅಂತಹ ನೂರಾರು ಮಂದಿಗಳ ತ್ಯಾಗವನ್ನು ಸ್ಮರಿಸಿಕೊಂಡರು.

ನಮ್ಮ ಸುಲಿಗೆಯು ನಿಲ್ಲುತ್ತದೆ, ದೇಶವು ತನ್ನ ಸ್ವತಂತ್ರ ಆರ್ಥಿಕ ನೀತಿಗಳಿಂದ ಅಭಿವೃದ್ಧಿಯ ಕಡೆಗೆ ಹೋಗುತ್ತದೆ ಎಂಬ ಹಿರಿಯಾಸೆಯಿಂದ ಕಾಂಗ್ರೆಸ್ಸಿಗರು - ಕಮ್ಯುನಿಸ್ಟರು - ಸೋಷಿಯಲಿಸ್ಟರಾದಿಯಾಗಿ ಎಲ್ಲ ರಾಜಕೀಯ ಪಕ್ಷಗಳ ಸಾವಿರಾರು ಕಾರ್ಯಕರ್ತರು ಸ್ವಾತಂತ್ರಕ್ಕಾಗಿ ಹೋರಾಡಿದರು. ತಮ್ಮ ಪ್ರಾಣಗಳನ್ನೇ ಕೊಟ್ಟರು. ಆದರೆ ನಂತರ ನಡೆದಿದ್ದೇನು ಎಂದು ಪ್ರಶ್ನಿಸಿದ ಎನ್.ಎಲ್. ಅವರು ಬ್ರಿಟಿಷರು ಮಾತ್ರ ಇಲ್ಲಿಂದ ತೊಲಗಿದರು ಅವರ ಬಂಡವಾಳ ಇಲ್ಲೆ ಉಳಿಯಿತು ಮತ್ತು ಬೆಳೆಯಿತು ಎಂದರು. ಇದರ ಜೊತೆಗೆ ಅಮೆರಿಕನ್ ಸಾಮ್ರಾಜ್ಯಶಾಹಿಗಳಿಗೂ ಈ ದೇಶದಲ್ಲಿ ಅನುವು ಮಾಡಿಕೊಟ್ಟ ಕಾಂಗ್ರೆಸ್ ಸರಕಾರ ನಮ್ಮ ದೇಶದ ಜನರನ್ನು ವಿದೇಶಿಯರ ಸುಲಿಗೆಗೆ ಒಳಗುಮಾಡಿದ್ದಾರೆ ಎಂದು ಖಂಡಿಸಿದರು.

ಸ್ವಾತಂತ್ರ ಬಂದು 32 ವರ್ಷಗಳು ಸಂದರೂ ಸಾಮಾಜಿಕ ನ್ಯಾಯವು ಈ ದೇಶದ ದಲಿತ ಜನತೆಗೆ ಸಿಕ್ಕೇ ಇಲ್ಲ ಎಂದು ನೊಂದು ನುಡಿದ ಎನ್.ಎಲ್. ಅವರು ದಲಿತ ಸಮಸ್ಯೆ ಇಡೀ ದೇಶಕ್ಕೆ ಅವಮಾನ ಎಂದರು.

ದೇಶದ ಸ್ವತಂತ್ರ ಅಭಿವೃದ್ಧಿ ಕಾಂಗ್ರೆಸ್‌ನಿಂದಾಗಲೀ ಜನತಾಪಕ್ಷದಿಂದಾಗಲೀ ಸಾಧ್ಯವಿಲ್ಲ ಎಂಬುದನ್ನು ನಮ್ಮ 32 ವರ್ಷಗಳ ಅನುಭವವೇ ತೋರಿಸಿದೆ ಎಂದು ಮನದಟ್ಟು ಮಾಡಿಕೊಟ್ಟ ಮಾರ್ಕ್ಸ್‌ವಾದಿ ನಾಯಕರು, ನಮ್ಮ ಅಭಿವೃದ್ಧಿಗೆ ದುಡಿಯುವ ಜನತೆಯಾದ ರೈತ-ಕಾರ್ಮಿಕ ಮತ್ತು ದಲಿತರ ಸಂಘಟನೆ ಮತ್ತು ಅವರದ್ದೇ ಆದ ಸರ್ಕಾರ ತರಲು ಪಣತೊಡುವ ಕಾರ್ಯವನ್ನು ಮಾಡುವ ದಿನವು ಇದಾಗಲಿ ಎಂದು ಕಿಕ್ಕಿರಿದು ತುಂಬಿದ್ದ ಯುವಜನ-ವಿದ್ಯಾರ್ಥಿ ಮತ್ತು ಸಾಹಿತಿಗಳಿಗೆ ಅವರು ಮನವಿ ಮಾಡಿದರು.

ದಲಿತಕವಿ ಸಿದ್ದಲಿಂಗಯ್ಯ ಅವರು ಬರೆದಿರುವ "ಸಾವಿರಾರು ನದಿಗಳು" ಕವನ ಸಂಕಲನವನ್ನು ಪತ್ರಕರ್ತೆ ವಿಜಯ ಸುಬ್ರಮಣ್ಯಂ ಅವರು ಸಮಾರಂಭದ ಆರಂಭದಲ್ಲಿ ಬಿಡುಗಡೆ ಮಾಡಿದರು.

ಶ್ರೀ ಚಲಂಬೆ ನ್ನೂರ್‌ಕರ್ ಅವರು ವ್ಯವಸ್ಥೆ ಮಾಡಿದ್ದ ಶೋಷಿತ ಜನತೆಯ ಸ್ಥಿತಿಗತಿಗಳು ಮತ್ತು ಅವರ ಹೋರಾಟವನ್ನು ಪ್ರತಿಬಿಂಬಿಸುವ ಹಲವು ಭಿತ್ತಿಪತ್ರಗಳು ಸಮಾರಂಭಕ್ಕೆ ಅರ್ಥಪೂರ್ಣತೆಯನ್ನು ತಂದುಕೊಟ್ಟಿತ್ತು.

ಸಮಾರಂಭದ ನಂತರ 'ಸಮುದಾಯ' ತಂಡದವರು ಸಿ.ಜಿ.ಕೃಷ್ಣಸ್ವಾಮಿಯವರು ನಿರ್ದೇಶಿಸಿದ 'ಬೆಲ್ಚಿ' ನಾಟಕ ಪ್ರದರ್ಶನವಿತ್ತರು.

●

ಎಸ್.ಎಫ್.ಐ. ದ. ಕ. ಜಿಲ್ಲಾ ಸಮಿತಿ ಸಭೆ

ಸ್ಟೂಡೆಂಟ್ಸ್ ಫೆಡರೇಷನ್ ಆಫ್ ಇಂಡಿಯಾದ ದ.ಕ.ಜಿಲ್ಲಾ ಸಮಿತಿಯು ತಾ.19-8-79 ರಂದು ಮಂಗಳೂರಿನ ಜಿಲ್ಲಾ ಕಛೇರಿಯಲ್ಲಿ ಸಭೆ ಸೇರಿತು. ಉಡುಪಿ ಎಲ್.ಐ.ಸಿ. ನೌಕರರ ಮುಂದಾಳುಗಳಾದ ಕಾಂ. ಬಿ. ಮಾಧವರವರು ಈ ಸಭೆಗೆ ವಿಶೇಷವಾಗಿ ಆಹ್ವಾನಿತರಾಗಿ ಹಾಜರಿದ್ದರು. ಪ್ರತಿಯೊಂದು ತಾಲ್ಲೂಕಿನಿಂದ ಜಿಲ್ಲಾ ಸಮಿತಿಯ ಸದಸ್ಯರು ಮತ್ತು ಆಹ್ವಾನಿತರು ಆಗಮಿಸಿದ್ದರು.

ರಾಜ್ಯ ಸಮಿತಿಯ ವರದಿಯ ಕುರಿತು ಚರ್ಚೆ ನಡೆದ ಬಳಿಕ, ಜಿಲ್ಲಾ ಕಾರ್ಯದರ್ಶಿ ಶ್ರೀನಿವಾಸ ನಾಟೇಕರ್‌ರವರು ದ.ಕ.ಜಿಲ್ಲಾ ಚಟುವಟಿಕೆಯ ವರದಿಯನ್ನು ಒಪ್ಪಿಸಿದರು. ಪ್ರತಿಯೊಂದು ತಾಲ್ಲೂಕಿನ ಪ್ರತಿನಿಧಿಗಳು ತಮ್ಮ ವರದಿಗಳೊಂದಿಗೆ ಸಕ್ರಿಯವಾಗಿ ಚರ್ಚೆಯಲ್ಲಿ ಭಾಗವಹಿಸಿದ್ದರು. ಬಂಟ್ವಾಳದಲ್ಲಿ ಹೊಸ ಶಾಖೆಯೊಂದನ್ನು ತೆರೆಯಲು ತೀರ್ಮಾನಿಸಲಾಯಿತು. ಜಿಲ್ಲೆಯಲ್ಲಿ ಎಸ್.ಎಫ್.ಐ.ಯನ್ನು ಬಲಿಷ್ಠವಾಗಿ ಬೆಳೆಸಲು ಕೆಲವು ಯೋಜನೆಗಳನ್ನು ಹಾಕಿಕೊಳ್ಳಲಾಯಿತು.

ಬೇಡಿಕೆ ದಿನಾಚರಣೆ:

ಸೆಪ್ಟೆಂಬರ್ 14 ರಂದು ಜಿಲ್ಲೆಯಾದ್ಯಂತ ಪ್ರಭಾವಶಾಲಿಯಾಗಿ 'ಬೇಡಿಕೆ ದಿನಾಚರಣೆ'ಯನ್ನು ಆಚರಿಸಲು ತೀರ್ಮಾನಿಸಲಾಯಿತು. ಕೆಲವು ಮುಖ್ಯ ಬೇಡಿಕೆಗಳಿಗೆ ವಿದ್ಯಾರ್ಥಿಗಳಿಂದ ಸಹಿ ಸಂಗ್ರಹಣೆ ಮಾಡುವುದು. ಕರಪತ್ರಗಳನ್ನು ಹಂಚುವುದು, ಬ್ಯಾಡ್ಜ್‌ಗಳನ್ನು ಧರಿಸುವುದು ಮತ್ತು ಧ್ವಜಾರೋಹಣ ಮಾಡಿ ಘೋಷಣೆಗಳನ್ನು ಕೂಗುವ ಕಾರ್ಯಕ್ರಮಗಳನ್ನು ನಡೆಸಲು ತೀರ್ಮಾನಿಸಲಾಯಿತು. ಸಹಿ ಸಂಗ್ರಹವನ್ನು ರಾಜ್ಯ ಸಮಿತಿಗೆ ಕಳುಹಿಸಲು ನಿರ್ಧರಿಸಲಾಯಿತು.

ರಾಜ್ಯ ಮಟ್ಟದ ರಾಜಕೀಯ ಮತ್ತು ಶಿಕ್ಷಣ ತರಗತಿ ಶಿಬಿರ:

ಉಡುಪಿಯಲ್ಲಿ ಸೆಪ್ಟಂಬರ್ 15 ರಿಂದ 18 ರ ವರೆಗೆ ನಡೆಯಲಿರುವ ರಾಜಕೀಯ ತರಗತಿ ಶಿಬಿರವನ್ನು ಉಡುಪಿಯ ಕುಂಜಿಬೆಟ್ಟಿನ ಶಾರದಾ ಕಲ್ಯಾಣ ಮಂಟಪದಲ್ಲಿ ನಡೆಸಲು ತೀರ್ಮಾನಿಸಲಾಯಿತು. ಈ ಶಿಬಿರಕ್ಕೆ ಹಿತೈಷಿಗಳಿಂದ ಧನವನ್ನು ಸಂಗ್ರಹಿಸಲು ರಾಜ್ಯಮಟ್ಟದ ಶಿಕ್ಷಣ ತರಗತಿಯ ಸ್ವಾಗತ ಸಮಿತಿಯ ಹೆಸರಿನಲ್ಲಿ ಡೊನೇಷನ್ ಪುಸ್ತಕಗಳನ್ನು ಮುದ್ರಿಸುವುದಕ್ಕೆ ಅಂಗೀಕಾರ ನೀಡಲಾಯಿತು. ಕಾಂ.ಲಾಲನ್ ರವರನ್ನು ಕನ್ವೀನರ್ ಆಗಿ ನೇಮಿಸಲಾಯಿತು.

ದ.ಕ. ಜಿಲ್ಲಾ ಸಮಿತಿಗೆ ಉಡುಪಿಯಿಂದ ಬಿ.ಮಾಧವ, ಕುಂದಾಪುರದಿಂದ ಗಣೇಶ್ ಕಾರಂತ ಮತ್ತು ಜಯಕುಮಾರ್, ಮಂಗಳೂರಿನಿಂದ ಉಮೇಶ್, ಉಮೇಶ್‌ರಾವ್, ಮತ್ತು ಕಿಶೋರ್‌ಕುಮಾರ್‌ರವರನ್ನು ಜಿಲ್ಲಾ ಸಮಿತಿ ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಯಿತು. ಚಂದ್ರಶೇಖರ್ ಬಿ. ಯವರನ್ನು ಬಂಟ್ವಾಳದಿಂದ ಖಾಯಂ ಆಹ್ವಾನಿತರನ್ನಾಗಿ ಸೇರಿಸಿಕೊಳ್ಳಲಾಯಿತು. ಜಯಕುಮಾರ್ ರನ್ನು ಉಪಾಧ್ಯಕ್ಷರನ್ನಾಗಿಯೂ, ನಾಗೇಶ್‌ರವರನ್ನು ಜೊತೆ ಕಾರ್ಯದರ್ಶಿಯನ್ನಾಗಿಯೂ, ಉಮೇಶ್‌ರವರನ್ನು ಕೋಶಾಧಿಕಾರಿಯನ್ನಾಗಿಯೂ ನೇಮಿಸಲಾಯಿತು.

ಮಂಗಳೂರು ತಾಲ್ಲೂಕು ಸಮಿತಿಯ ಸಭೆ:

ಮಂಗಳೂರು ತಾಲ್ಲೂಕು ಸಮಿತಿಯು ತಾ.20-8-79 ರಂದು ಸಭೆ ಸೇರಿ ಮಂಗಳೂರಿನಲ್ಲಿ ಎಸ್. ಎಫ್. ಐ. ಯನ್ನು ಬಲಿಷ್ಠವಾಗಿ ಕಟ್ಟುವ ಕುರಿತು ಚರ್ಚಿಸಿ ಹೊಸ ಸದಸ್ಯರನ್ನು ಸಮಿತಿಗೆ ಸೇರಿಸಲಾಯಿತು.

ಉಮೇಶ್‌ರಾವ್ ರವರನ್ನು ಅಧ್ಯಕ್ಷರನ್ನಾಗಿಯೂ, ಚಂದ್ರಕಾಂತ್‌ರವರನ್ನು ಉಪಾಧ್ಯಕ್ಷರನ್ನಾಗಿಯೂ, ಮೋಹನ್ ಚಂದ್ರರವರನ್ನು ಕಾರ್ಯದರ್ಶಿಯನ್ನಾಗಿಯೂ, ಕಿಶೋರ್‌ಕುಮಾರ್‌ರವರನ್ನು ಜೊತೆ ಕಾರ್ಯದರ್ಶಿಗಳನ್ನಾಗಿಯೂ. ಟಿ.ವಿ.ಚಂದ್ರನ್‌ರವರನ್ನು ಕೋಶಾಧಿಕಾರಿಯನ್ನಾಗಿಯೂ ಆರಿಸಲಾಯಿತು.

○

ಶಿವಮೊಗ್ಗದಲ್ಲಿ ಆಗಸ್ಟ್ ಹದಿನೈದರಂದು ಕಪ್ಪುದಿನ ಆಚರಣೆ

ಕರ್ನಾಟಕ ದಲಿತ ಸಂಘರ್ಷ ಸಮಿತಿ ಮತ್ತು ಬಂಡಾಯ ಸಾಹಿತ್ಯ ಸಂಘಟನಾ ಕೇಂದ್ರ ಸಮಿತಿಯವರು ಕೊಟ್ಟ ಕರೆಯ ಮೇರೆಗೆ ಶಿವಮೊಗ್ಗದಲ್ಲಿ ಆಗಸ್ಟ್ ಹದಿನೈದರಂದು ಕಪ್ಪು ದಿನ ಆಚರಿಸಲಾಯಿತು.

ದಲಿತ ಸಂಘರ್ಷ ಸಮಿತಿಯ ಬಿ. ಕೃಷ್ಣಪ್ಪ, ಬಂಡಾಯ ಸಾಹಿತ್ಯ ಸಮಿತಿಯ ಎಂ. ಬಿ. ನಟರಾಜ್, ಛಾತ್ರ ಯುವಸಂಘರ್ಷವಾಹಿನಿಯ ಶಂಕರ ನಾರಾಯಣ ಇವರ ನೇತೃತ್ವದಲ್ಲಿ ಮೆರವಣಿಗೆ ನಡೆಸಲಾಯಿತು. ಈ ಮೆರವಣಿಗೆಯಲ್ಲಿ ಎಸ್. ಎಫ್. ಐ. ನ ಕೊಟ್ರೇಶ್, ನಾಗರಾಜ್, ಸಮುದಾಯದ ಕೆ. ಲಕ್ಷ್ಮೀನಾರಾಯಣ ರಾವ್, ಹಾಲಪ್ಪ ಮೊದಲಾದವರು ಭಾಗವಹಿಸಿದ್ದರು. ಸಂಜೆ ನಡೆದ ಸಭೆಯಲ್ಲಿ ಎಂ.ಬಿ. ನಟರಾಜ್, ವಿ. ಎನ್. ಲಕ್ಷ್ಮೀನಾರಾಯಣ, ದಿವಾಕರ ಹೆಗ್ಡೆ, ಬಿ. ಕೃಷ್ಣಪ್ಪ ಮೊದಲಾದವರು ಮಾತನಾಡಿದರು.

●

ಪುತ್ತೂರಿನಲ್ಲಿ ಕಪ್ಪುದಿನ ಆಚರಣೆ

ದಲಿತ ಸಂಘರ್ಷ ಸಮಿತಿಯ ದಕ್ಷಿಣ ಕನ್ನಡ ಜಿಲ್ಲೆಯ ವತಿಯಿಂದ ಆಗಸ್ಟ್ ಹದಿನೈದರಂದು ಕಪ್ಪುದಿನವನ್ನು ಇಲ್ಲಿ ಆಚರಿಸಲಾಯಿತು. ಶ್ರೀ ಸಾಂತಪ್ಪನಾಯಕ್ ಅವರು ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ದ. ಸ. ಸಮಿತಿಯ ದ. ಕ. ಶಾಖೆಯ ಸಂಚಾಲಕ ಶ್ರೀ ಬಿ. ರಾಮಕೃಷ್ಣ ಅವರು ಮಾತನಾಡಿದರು. ಅನೇಕ ವಿದ್ಯಾರ್ಥಿಗಳು ರೈತ ಕಾರ್ಮಿಕರು ಸಭೆಯಲ್ಲಿ ಭಾಗವಹಿಸಿದ್ದರು. ○

ಮಳ್ಳೂರಿನಲ್ಲಿ ರೈತರ ಬಹಿರಂಗ ಸಭೆ

ಮಳ್ಳೂರಿನ ರೈತಸಂಘದ ಆಶ್ರಯದಲ್ಲಿ ಆಗಸ್ಟ್ 15ರಂದು ಬಹಿರಂಗ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಜಿ. ಪಾಪಣ್ಣ ಅವರು ವಹಿಸಿದ್ದರು. ಸಭೆಯನ್ನು ಉದ್ದೇಶಿಸಿ, ಕಾಂ. ಲಕ್ಷ್ಮಣರೆಡ್ಡಿ, ಎಂ. ಮುನಿಕೃಷ್ಣಪ್ಪ, ರಾಜಣ್ಣ ಮತ್ತು ಜಿ. ಮಕರಪ್ಪ ಅವರು ಮಾತನಾಡಿದರು. ಜನಸಾಮಾನ್ಯರು ಐಕ್ಯತೆಯಿಂದ ಸಂಘಟಿತರಾಗಿ, ಶೋಷಣೆ, ದೌರ್ಜನ್ಯಗಳ ವಿರುದ್ಧ ಹೋರಾಡಬೇಕಾಗಿರುವ ಅಗತ್ಯವನ್ನು ಒತ್ತಿ ಹೇಳಲಾಯಿತು. ಶಿಡ್ಲಘಟ್ಟದಲ್ಲಿ ಸೆಪ್ಟೆಂಬರ್ 9, 10 ರಂದು ನಡೆಯಲಿರುವ ಕೋಲಾರ ಜಿಲ್ಲೆ ರೈತಸಂಘದ ಆರನೇ ಸಮ್ಮೇಳನದ ವಿವರಗಳನ್ನು ಸಭೆಗೆ ನೀಡಲಾಯಿತು.

●

ಸಿ. ಐ. ಟಿ. ಯು. ರಾಜ್ಯ ಮಂಡಳಿಯ ಸದಸ್ಯರ ಗಮನಕ್ಕೆ

ಸಿ. ಐ. ಟಿ. ಯು. ರಾಜ್ಯ ಮಂಡಳಿಯ ಸದಸ್ಯರಿಗೆ ಕೆ. ಜಿ. ಎಫ್. ನ ರಾಬರ್ಟ್ಸನ್ ಪೇಟೆಯ ವಾಸವಿ ಕಲ್ಯಾಣ ಮಂಟಪದಲ್ಲಿ ಆಗಸ್ಟ್ 31 ಮತ್ತು ಸೆಪ್ಟಂಬರ್ 1 ರಂದು ಶಾಲೆ ನಡೆಯುತ್ತದೆ. ಕಾಂ. ಎಂ. ಕೆ. ಪಂಧೆ 'ಜಾಗತಿಕ ಕಾರ್ಮಿಕ ವರ್ಗದ ಚಳುವಳಿಯ ಇತಿಹಾಸ'ವನ್ನು ಬೋಧಿಸುತ್ತಾರೆ. 2-9-79 ರಂದು ಸಿ. ಐ. ಟಿ. ಯು. ರಾಜ್ಯ ಸಮಿತಿಯ ಸಭೆ. 3-9-79ರಂದು ಸಿ. ಐ. ಟಿ. ಯು. ರಾಜ್ಯ ಮಂಡಳಿಯ ಸಭೆ.

2-9-79 ರಂದು ಸಂಜೆ ಬಹಿರಂಗ ಸಭೆ.

ರಾಜ್ಯದ ಸಿ. ಐ. ಟಿ. ಯು. ಮುಖಂಡರು ಮತ್ತು
ಕಾಂ. ಪಿ. ರಾಮಮೂರ್ತಿ, ಎಂ. ಪಿ.
ಕಾಂ. ಆರ್. ಉಮಾನಾಥ್, ಎಂ. ಎಲ್. ಎ.
ಭಾಷಣ ಮಾಡುತ್ತಾರೆ.

ಕೇರಳ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆ-ಸಿ·ಪಿ·ಐ· ನಂಟು!

ಇತ್ತೀಚೆಗೆ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯದ ಬಗ್ಗೆ ಸಿ.ಪಿ.ಐ. ತುಂಬಾ ಮಾತನಾಡುತ್ತಿದೆ. ಆದರೆ ಅದರ ವರ್ತನೆಯನ್ನು ಗಮನಿಸಿದಾಗ ಈ ಮಾತುಗಳ ಹಿಂದಿರುವ ಪ್ರಾಮಾಣಿಕತೆಯನ್ನು ಸಂದೇಹಿಸುವುದು ಅನಿವಾರ್ಯವಾಗುತ್ತಿದೆ. 1969 ರಲ್ಲಿ ಸಿ.ಪಿ.ಐ. ಕೇರಳದ ಎಡ ಸಂಯುಕ್ತರಂಗ ಸರಕಾರಕ್ಕೆ ದ್ರೋಹ ಬಗೆದು ಇಂಡಿಕೇಟ್ ಕಾಂಗ್ರೆಸ್ಸಿನ ಜೊತೆಗೆ ಸಮ್ಮಿಶ್ರ ಸರಕಾರ ನಡೆಸಿದಂದಿನಿಂದಲೂ ಇದು ನಾವು ಕಂಡುಕೊಂಡ ಅನುಭವ. ಸಿ.ಪಿ.ಐ.(ಎಂ) ಮತ್ತಿತರ ಎಡಪಕ್ಷಗಳು, ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಒಗ್ಗಟ್ಟಿಗಾಗಿ ಶ್ರಮಿಸಿ ಅದರಲ್ಲಿ ಯಶಸ್ವಿಯಾದ ಎಲ್ಲಾ ಸಂದರ್ಭದಲ್ಲೂ ಸಿ.ಪಿ.ಐ. ಈ ಐಕ್ಯವನ್ನು ವಿಚ್ಛಿದ್ರಗೊಳಿಸಲು ತನ್ನೆಲ್ಲ ಪ್ರಯತ್ನಗಳನ್ನೂ ಮಾಡಿದೆ. ಕೇರಳದಲ್ಲಿ ಕಳೆದ 16 ವರ್ಷಗಳಲ್ಲಿ 21 ಬಾರಿ ಮುಂದೂಡಲ್ಪಟ್ಟಿರುವ ಪಂಚಾಯತ್ ಮತ್ತು ನಗರಸಭಾ ಚುನಾವಣೆಗಳು ಇದೀಗ ನಡೆಯಲಿರುವ ಸಮಯದಲ್ಲಿ ಸಿ.ಪಿ.ಐ., ಕಾಂಗ್ರೆಸ್(ಐ)ಜೊತೆಗೆ ಚುನಾವಣಾ ಒಪ್ಪಂದ ಮಾಡಿಕೊಂಡಿರುವುದು ಸಿ.ಪಿ ಐ.ನ ಇಬ್ಬಗೆಯ ನೀತಿಗೆ ದೊರೆತಿರುವ ಹೊಚ್ಚ ಹೊಸ ದೃಷ್ಟಾಂತ.

ಮುಂಬರುವ ನಗರಸಭಾ ಮತ್ತು ಪಂಚಾಯತ್ ಚುನಾವಣೆಗಳಲ್ಲಿ ತಮ್ಮ ಆಳುವ ರಂಗದ ಘಟಕಗಳು ರಾಜಕೀಯ ಪಕ್ಷಗಳಾಗಿ ಸ್ಪರ್ಧಿಸುವುದಿಲ್ಲವೆಂದೂ, ಸ್ಥಳೀಯ ಮತ್ತು ಸ್ವಯಮಾಡಳಿತ ಸಂಸ್ಥೆಗಳಲ್ಲಿ ರಾಜಕೀಯ ಭೇದಗಳನ್ನು ಮರೆತು ಅಭಿವೃದ್ಧಿ ಕಾರ್ಯದಲ್ಲಿ ಜನತೆಯನ್ನು ತೊಡಗಿಸುವಂತೆ ಮಾಡುವುದಕ್ಕಾಗಿ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆಯೆಂದೂ ಕೇರಳದ ಆಳುವ ರಂಗದ ಸಮನ್ವಯಸಮಿತಿ ತಿಳಿಸಿದೆ. ಆದರೆ ಈ ನಿರ್ಣಯದ ಹಿಂದಿರುವ ವಾಸ್ತವ ಉದ್ದೇಶ ಸ್ಥಳೀಯ ಸಂಸ್ಥೆಗಳಿಂದ ರಾಜಕಾರಣವನ್ನು ದೂರವಿರಿಸುವುದಲ್ಲ; ಬದಲು ಆಳುವ ಸಂಯುಕ್ತರಂಗದ ಬೇರೆ ಬೇರೆ ಪಕ್ಷಗಳಿಗೆ ತಮಗೆ ಬೇಕಾದವರೊಂದಿಗೆ ಚುನಾವಣಾ ಒಪ್ಪಂದ ಬೆಳೆಸಿಕೊಳ್ಳಲು ಸ್ವಾತಂತ್ರ್ಯ ನೀಡುವ ಸಲುವಾಗಿ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆಯೆಂಬುದು ಈಗ ಗೊತ್ತಾಗುತ್ತಿದೆ.

"ಇಂದಿರಾಗಾಂಧಿ ಮತ್ತು ಆಕೆಯ ಕಾಂಗ್ರೆಸ್‌ನ ವಿರುದ್ಧ ತಾನು ಹೋರಾಡುವುದು ಖಂಡಿತ, ಇದಕ್ಕೆ ಸಾವಿರ ಪುರಾವೆ ಬೇಕಾದರೂ ನೀಡಬಲ್ಲೆ" ಎನ್ನುತ್ತಿದ್ದ ಸಿ.ಪಿ.ಐ.. ತನ್ನ ಈ ಆಶ್ವಾಸನೆಗಳನ್ನು ಮರೆತು ಕೇರಳದಲ್ಲಿ ಕಾಂಗ್ರೆ ಜೊತೆಗೆ ನಂಟು ಬೆಳೆಸಿರುವುದು ಅದರ ಮಾತುಗಳೆಲ್ಲ ಕೇವಲ ಬಡಾಯಿ ಮಾತ್ರ ಎಂಬುದನ್ನು ಸ್ಪಷ್ಟಪಡಿಸಿದೆ. ಸಿ.ಪಿ.ಐ. ಮುಂದಾಳು ಎಮ್.ಎನ್.ಗೋವಿಂದನ್ ನಾಯರ್ ತ್ರಿವೆಂಡ್ರಮ್‌ನಲ್ಲಿ ಸಾರ್ವಜನಿಕ ಸಭೆಯೊಂದನ್ನು ಉದ್ದೇಶಿಸಿ 'ಎಡ ಮತ್ತು ಪ್ರಜಾಸತ್ತಾತ್ಮಕಶಕ್ತಿಗಳ ಐಕ್ಯಕ್ಕೆ ಈಗ ಕಾಲಪರಿಪಕ್ವವಾಗಿದೆ. ಸಿ.ಪಿ.ಐ. ಆರ್.ಎಸ್.ಪಿ. ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಗಳು ಒಂದಾಗಿ ಈ ಚುನಾವಣೆಗಳನ್ನು ಎದುರಿಸಬೇಕು' ಎಂದು ಭಾಷಣ ಬಿಗಿಯುತ್ತಿದ್ದ ಸಮಯದಲ್ಲೇ ಅವರ ಪಕ್ಷದ ಮುಂದಾಳುಗಳು ಚುನಾವಣಾ ಮೈತ್ರಿಗಾಗಿ ಕುಖ್ಯಾತ ಕೆ.ಕರುಣಾಕರನ್ ಅವರೊಂದಿಗೆ ಚಕ್ಕಂದವಾಡುತ್ತಿದ್ದರು. ಕೆಲವೇ ಸಮಯದ ಹಿಂದೆ ಇದೇ ಕರುಣಾಕರನ್ ಮತ್ತು ಅವರ ಇಂದಿರಾ ಕಾಂಗ್ರೆಸ್ ಪಕ್ಷವನ್ನು ಕೇರಳ ಸಮ್ಮಿಶ್ರ ಸರಕಾರದಿಂದ ಅಸ್ಪೃಶ್ಯನಂತೆ ಒದ್ದು ಓಡಿಸಲಾಗಿತ್ತು. ತಾನು ಕಾಂಗ್ರೆಸ್(ಐ)ನೊಂದಿಗೆ ಯಾವುದೇ ಸಂಬಂಧವಿರಿಸಿಕೊಳ್ಳುವುದಿಲ್ಲವೆಂದು ಎ. ಕೆ. ಆಂಟನಿ ಅವರ ಕಾಂಗ್ರೆಸ್ ಪಕ್ಷ ದೃಢ ನಿಲುಮೆಯನ್ನು ತಳೆದುದರಿಂದಾಗಿ ಕಾಂಗ್ರೆಸ್ (ಐ) ಯನ್ನು ಸಂಯುಕ್ತರಂಗದಿಂದ ಹೊರಹಾಕಬೇಕಾಯಿತೇ ಹೊರತು ಸಿ.ಪಿ.ಐ.ಗೆ ಕಾಂಗ್ರೆ ಪ್ರತ್ಯೇಕವಾಗುವುದೇನೂ ಬೇಕಾಗಿರಲಿಲ್ಲ. ಹಾಗಾಗಿ ಸಿ.ಪಿ ಐ. ಸ್ಥಳೀಯ ಚುನಾವಣೆಗಾಗಿ ಇಂದಿರಾ ಕಾಂಗ್ರೆಸ್ಸನ್ನು ಮತ್ತೊಮ್ಮೆ ಆಲಿಂಗಿಸಿಕೊಂಡಿದೆ. ಆಳುವರಂಗದಿಂದ ಹೊರದೂಡಲ್ಪಟ್ಟಮೇಲೆ ಇಂದಿರಾ ಕಾಂಗ್ರೆಸ್ ಮುಸ್ಲಿಂ ಲೀಗಿನ ಜೊತೆಗೂ ಸಂಬಂಧ ಬೆಳೆಸಲು ತುಂಬಾ ಪ್ರಯತ್ನಿಸಿತ್ತು. ಕಾಂಗ್ರೆ ಮಾತ್ರವಲ್ಲದೆ ನಾಯರ್ ಸರ್ವಿಸ್ ಸೊಸೈಟಿಯ ರಾಜಕೀಯ ಪಕ್ಷವಾಗಿರುವ ನ್ಯಾಷನಲ್ ಡೆಮಾಕ್ರಟಿಕ್ ಪಾರ್ಟಿ (ಎನ್.ಡಿ ಪಿ.) ಯನ್ನು ಕೂಡಾ ಅದು ಕೋಮುವಾರು ಪಕ್ಷವೆನ್ನುವ ಕಾರಣಕ್ಕಾಗಿ ಆಳುವ ಸಂಯುಕ್ತ ರಂಗದಿಂದ ಹೊರಹಾಕಲಾಗಿತ್ತು. ಸದ್ಯ ಸಿ.ಪಿ.ಐ.ನ ಪ್ರಯತ್ನಗಳ ಫಲವಾಗಿ ಮುಸ್ಲಿಂ ಲೀಗ್ ಮತ್ತು ಒಮ್ಮೆ ಕೋಮುವಾದಿ ಎನಿಸಿಕೊಂಡಿದ್ದ ಎನ್.ಡಿ.ಪಿ. ಇವೆಲ್ಲ ಕಾಂಗ್ರೆ ಕೂಟವನ್ನು ಸೇರುವಂತಾಗಿದೆ. ಇವರೆಲ್ಲ ಯಾರ ವಿರುದ್ಧ ಒಂದಾಗಿದ್ದಾರೆ?

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಸ್ಥಳೀಯ ಸಂಸ್ಥೆಗಳಿಗಾಗಿ ನಡೆಯುವ ಈ ಚುನಾವಣೆಗಳಲ್ಲಿ ತಾನು ರಾಜಕೀಯವಾಗಿಯೇ ಭಾಗವಹಿಸುವೆನೆಂದು ಸಾರಿಕೊಂಡಿದೆ. ಕಾಂಗ್ರೆಸ್(ಐ) ಪ್ರತಿನಿಧಿಸುವ ನಿರಂಕುಶಾಧಿಕಾರಿ ಶಕ್ತಿಗಳನ್ನೂ ಆರೆಸ್ಸೆಸ್ ಪ್ರತಿನಿಧಿಸುವ ಕೋಮುವಾದಿ ಶಕ್ತಿಗಳನ್ನೂ ವಿರೋಧಿಸುವ ತನ್ನ ಅಂಗೀಕೃತ ನಿಲುಮೆಗನುಗುಣವಾಗಿ ಇವೆರಡೂ ದುಷ್ಟಶಕ್ತಿಗಳಿಗೆ ವಿರುದ್ಧವಾಗಿರುವ ಎಲ್ಲಾ ರಾಜಕೀಯ ಪಕ್ಷಗಳ ಜೊತೆಗೂ ತಾನು ಮೈತ್ರಿ ಬೆಳೆಸುವುದಾಗಿಯೂ ಸಿ. ಪಿ. ಐ. (ಎಂ) ಘೋಷಿಸಿದೆ. ಕಾಂಗ್ರೆಸ್(ಐ) ಮತ್ತು ಆರೆಸ್ಸೆಸ್‌ಗಳೊಂದಿಗೆ ಎಲ್ಲೇ ಆದರೂ ಸಖ್ಯ ಬೆಳೆಸುವ, ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳುವ ಯಾರೊಂದಿಗೂ ಸಿ. ಪಿ. ಐ. (ಎಂ) ಚುನಾವಣಾ ಒಪ್ಪಂದ ಮಾಡಿಕೊಳ್ಳಲಾರದು. ಈ ತತ್ವಕ್ಕೆ ಅನುಗುಣವಾಗಿ ಕೇರಳ ರಾಜ್ಯದ ಹಲವಾರು ಕಡೆ ಎ. ಕೆ. ಆಂಟನಿ ನೇತೃತ್ವದ ಕಾಂಗ್ರೆಸ್, ಆರ್. ಬಾಲಕೃಷ್ಣನ್ ಪಿಳ್ಳೆ ಮುಂದಾಳುತ್ವದಲ್ಲಿರುವ ಜನತಾಪಕ್ಷದ ಒಂದು ವಿಭಾಗ, ವಿರೋಧಪಕ್ಷ ಮುಸ್ಲಿಂ ಲೀಗ್, ರಾಷ್ಟ್ರೀಯ ಆರ್. ಎಸ್. ಪಿ, ಕೇರಳ ಆರ್. ಎಸ್. ಪಿ. ಮತ್ತು ಸಂಸ್ಥಾ ಕಾಂಗ್ರೆಸಿನ ಕೆಲವರು ಪ್ರಜಾಸತ್ತಾತ್ಮಕ, ಜಾತ್ಯತೀತ ಮನೋಭಾವದ ವ್ಯಕ್ತಿಗಳೊಂದಿಗೂ ಸಿ. ಪಿ. ಐ. (ಎಂ) ಹೊಂದಾಣಿಕೆಗೆ ಬರಲು ಸಾಧ್ಯವಾಗಿದೆ. ನಿರಂಕುಶಾಧಿಕಾರಕ್ಕೂ, ಕೋಮುವಾದಕ್ಕೂ ವಿರುದ್ಧವಾಗಿರುವ ಸಿ. ಪಿ. ಐ. (ಎಂ). ಆಂಟನಿ ಕಾಂಗ್ರೆಸ್ ಮತ್ತು ಆರ್. ಎಸ್. ಪಿ. ಗಳ ಒಕ್ಕೂಟವನ್ನು ವಿರೋಧಿಸುವ ಸಲುವಾಗಿಯೇ ಸಿ.ಪಿ.ಐ. ನ ಪ್ರಯತ್ನಗಳ ಫಲವಾಗಿ ಕಾಂಗ್ರೆ, ಮುಸ್ಲಿಂಲೀಗ್ ಮತ್ತು ಎನ್. ಡಿ. ಪಿ. ಗಳನ್ನೊಳಗೊಂಡ "ಎಡ ಮತ್ತು ಪ್ರಜಾಸತ್ತಾತ್ಮಕ ರಂಗವು" ರೂಪುಗೊಂಡಿದೆ. ಇದು ಸಿ. ಪಿ. ಐ. ನ "ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಒಂದಾಗಬೇಕು" ಎನ್ನುವ ಘೋಷಣೆಯ ಹಿಂದಿರುವ ರಹಸ್ಯ!

ಕೇರಳದ ಆಳುವರಂಗದ ಧೋರಣೆಗಳನ್ನು ಹೆಚ್ಚುಕಡಿಮೆ ಯಾವಾಗಲೂ ಬೆಂಬಲಿಸುವ ಪತ್ರಿಕೆಗಳು ಸಿ. ಪಿ. ಐ. ನ ಈ ವರ್ತನೆಯನ್ನು ಟೀಕಿಸಿವೆ. 'ಮಲೆಯಾಳ ಮನೋರಮ' ಸಿ. ಪಿ. ಐ.ನ ಧೋರಣೆಯನ್ನು ಖಂಡಿಸಿ, "ಕಳಕೊಳ್ಳಬೇಕಾಗಿರುವುದು ತತ್ವಗಳನ್ನು ಮಾತ್ರ; ಇನ್ನೇನೂ ಅಲ್ಲ" ಎಂದು ವ್ಯಾಖ್ಯಾನಿಸಿದೆ. ಕಾಂಗ್ರೆ ಮತ್ತು ಎನ್. ಡಿ. ಪಿ. ಗಳೊಂದಿಗೆ ಸಿ. ಪಿ. ಐ. ಮತ್ತು ಮುಸ್ಲಿಂಲೀಗುಗಳು ಮಾಡಿಕೊಂಡಿರುವ ಒಪ್ಪಂದವನ್ನು 'ಮಾತೃಭೂಮಿ' ಪತ್ರಿಕೆಯೂ ಕಟುವಾಗಿ ಟೀಕಿಸಿ 'ಆಳುವ ರಂಗದಲ್ಲಿರುವ ಸಿ. ಪಿ. ಐ. ಗಂಭೀರ ಸವಾಲುಗಳನ್ನು ಎದುರಿಸುತ್ತಿದೆ" ಎಂದಿದೆ. ಹೀಗೆ ಆಳುವ ರಂಗದ ಬೇರೆಬೇರೆ ಘಟಕಗಳು ಪರಸ್ಪರರನ್ನು ವಿರೋಧಿಸಿಕೊಳ್ಳುತ್ತಿರುವಾಗ ಸಂಯುಕ್ತರಂಗದ ಸಮನ್ವಯ ಸಮಿತಿಯು ಪಂಚಾಯತ್ ಮತ್ತು ಮುನಿಸಿಪಲ್ ಚುನಾವಣೆಗಳಲ್ಲಿ ಮಂತ್ರಿಗಳು ಪ್ರಚಾರಕಾರ್ಯ ನಡೆಸಬಾರದು ಎನ್ನುವ ಬುದ್ಧಿವಂತಿಕೆಯ ತೀರ್ಮಾನವನ್ನು ಕೈಗೊಂಡಿದೆ.

ಬಹುಶಃ ಮುಂದಿನ ಸಲ ಎಂ. ಎನ್. ಗೋವಿಂದನ್ ನಾಯರ್ ಕೇರಳದಲ್ಲಿ ಬಹಿರಂಗಸಭೆಗಳಲ್ಲಿ ಮಾಡುವ ಭಾಷಣ ತುಂಬಾ ಮೋಜಿನದ್ದಾಗಿರುತ್ತದೆ. !

●

ಕಾಂ. ಕೃಷ್ಣಪಿಳ್ಳೆ

ಕೇರಳದ ಕಮ್ಯುನಿಸ್ಟ್ ಚಳುವಳಿಯ ಸ್ಥಾಪಕರಾದ ಕಾಂ. ಕೃಷ್ಣಪಿಳ್ಳೆ ನಮ್ಮನ್ನಗಲಿ ಇಂದಿಗೆ 31 ವರ್ಷಗಳಾದವು.

ಒಬ್ಬ ರಾಜಕೀಯ ನಾಯಕನಾಗಬೇಕಿದ್ದರೆ ಕನಿಷ್ಟಪಕ್ಷ ಪದವೀಧರನಾದರೂ ಆಗಬೇಕೆಂಬ ಸಂದರ್ಭದಲ್ಲೇ 5ನೇ ತರಗತಿಗಿಂತ ಹೆಚ್ಚಿನ ವಿದ್ಯಾಭ್ಯಾಸವಿಲ್ಲದ ಕಾಂ. ಕೃಷ್ಣಪಿಳ್ಳೆಯವರು ಕೇರಳದ ರಾಜಕೀಯ ಚಳುವಳಿಯ ನಾಯಕತ್ವಕ್ಕೆ ಬಂದದ್ದು.

1906ರಲ್ಲಿ ಜನಿಸಿದ ಕಾಂ. ಕೃಷ್ಣಪಿಳ್ಳೆಯವರು ತಮ್ಮ ಎಳೆಯ ವಯಸ್ಸಿನಲ್ಲೇ ತಂದೆ ತಾಯಿಗಳನ್ನು ಕಳೆದುಕೊಂಡರು. 5ನೇ ತರಗತಿಗಿಂತ ಹೆಚ್ಚಿಗೆ ಓದಲು ಅವರ ಆರ್ಥಿಕ ಪರಿಸ್ಥಿತಿ ಎಡೆಕೊಡಲಿಲ್ಲ. ಆದಕಾರಣ ಆಲಪ್ಪಿಯಲ್ಲಿ ತೆಂಗಿನ ನಾರುಮಾಡುವ ಕೆಲಸಗಾರನಾಗಿ ಕೆಲವು ಕಾಲ ದುಡಿದ ನಂತರ ಊರು ಬಿಟ್ಟರು. 1922 ರಲ್ಲಿ ಹಿಂತಿರುಗಿ ಬಂದರು. 1924 ರಲ್ಲಿ ವೈಕ್ಕಂ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಇದರ ಮಧ್ಯೆ ಹಿಂದಿ ಕಲಿತರು. 1927ರಲ್ಲಿ ಪುನಃ ಊರು ಬಿಟ್ಟು ಅಲಹಾಬಾದಿಗೆ ತೆರಳಿದರು. 1929 ರಲ್ಲಿ ದಕ್ಷಿಣ ಭಾರತ ಹಿಂದಿ ಪ್ರಚಾರಕನಾಗಿ ಹಿಂತಿರುಗಿದರು. 1930 ರಲ್ಲಿ ಉಪ್ಪು ಸತ್ಯಾಗ್ರಹದಲ್ಲಿ ಭಾಗವಹಿಸಿದ ಕಾರಣ ಸೆರೆಮನೆ ವಾಸವಾಯಿತು. 1931ರಲ್ಲಿ ಕಾಂ. ಎ. ಕೆ. ಜಿ. ಯೊಂದಿಗೆ ಗುರುವಾಯೂರ್ ದೇವಸ್ಥಾನದ ಮುಂದೆ ಸತ್ಯಾಗ್ರಹ ನಡೆಸಿದರು. ಇದಾದ ಮೇಲೆ ರೈತ ಕಾರ್ಮಿಕ ರಂಗದಲ್ಲಿ ವರ್ಗಸಂಘಟನೆ ಕಟ್ಟಲು ನಿರತರಾದರು. 1938-40 ರಲ್ಲಿ ರೂಪಗೊಂಡ ಆಲಪ್ಪಿ ಲೇಬರ್ ಅಸೋಸಿಯೇಷನ್, ಕಲ್ಲಿಕೋಟೆಯ ಕಾರ್ಮಿಕಸಂಘ ಇವೆಲ್ಲವೂ ಇದರ ಫಲವಾಗಿಯೇ. ರೈತಕಾರ್ಮಿಕರಲ್ಲಿ ವರ್ಗ ಜಾಗೃತಿ ಬೆಳೆಸಲು ಹಗಲಿರುಳೆನ್ನದೆ ದುಡಿದರು. ಕೇರಳದ ಅನೇಕ ಕಡೆಗಳಲ್ಲಿ ಕಾರ್ಮಿಕ ಸಂಘಟನೆಗಳನ್ನು ಕಟ್ಟಿದರು.

1934 ರಲ್ಲಿ ಕೇರಳದ ಕಾಂಗ್ರೆಸ್ ಸೋಷಲಿಸ್ಟ್ ಪಾರ್ಟಿಯ ಕಾರ್ಯದರ್ಶಿಯಾಗಿ ಆಯ್ಕೆಯಾದರು.

1938ರಲ್ಲಿ ಆಲಪ್ಪಿ, ಮುಹಮ್ಮ, ಚೇರ್ತಲ ಮುಂತಾದ ಸ್ಥಳಗಳಲ್ಲಿ ಸುಮಾರು ನಲವತ್ತು ಸಾವಿರಕ್ಕೂ ಹೆಚ್ಚಿನ ಕಾರ್ಮಿಕರನ್ನು ಸಂಘಟಿಸಿ ಹೋರಾಟ ನಡೆಸಿದರು. ಮಾಲೀಕರು ಅವರ ಬಾಡಿಗೆ ಗೂಂಡಾಗಳು, ಪೋಲೀಸರೂ ಸೇರಿ ಭೀಕರ ದಬ್ಬಾಳಿಕೆಯನ್ನೇ ನಡೆಸಿದರು. ಗೋಲಿಬಾರಿನಲ್ಲಿ ಇಬ್ಬರು ಸತ್ತರು, ಇನ್ನೂರಕ್ಕೂ ಹೆಚ್ಚಿನ ಜನರಿಗೆ ಗಾಯವಾಯಿತು. ಈ ಹೋರಾಟಕ್ಕೆ ನಾಯಕತ್ವ ವಹಿಸಿದ್ದ ಕಾಂ. ಕೃಷ್ಣಪಿಳ್ಳೆ ಮತ್ತು ಇನ್ನೂರಕ್ಕೂ ಹೆಚ್ಚಿನ ಜನರನ್ನು ಬಂಧಿಸಿ, ಜೈಲಿನಲ್ಲಿ ಚಿತ್ರಹಿಂಸೆ ಮಾಡಿದರು. ಆದರೂ ಹೋರಾಟ ಇಪ್ಪತ್ತೊಂದು ದಿನಗಳ ಕಾಲ ನಡೆಯಿತು.

1939ನೇಯ ಇಸವಿ ಕೇರಳದ ದುಡಿಯುವ ವರ್ಗದ ಚರಿತ್ರೆಯಲ್ಲಿ ಒಂದು ಸ್ಮರಣೀಯ ವರ್ಷ. ಆ ವರ್ಷವೇ ಕೇರಳದ ಕಮ್ಯುನಿಸ್ಟ್ ಪಾರ್ಟಿಯು ಜನ್ಮತಾಳಿದ್ದು. 1939 ರಲ್ಲಿ ಕೇರಳದ ಕಮ್ಯುನಿಸ್ಟ್ ಪಕ್ಷ ರೂಪಗೊಂಡಾಗ ಕಾಂ. ಕೃಷ್ಣಪಿಳ್ಳೆ ಅದರ ಕಾರ್ಯದರ್ಶಿಯಾದರು. ನಂತರ 1940 ರಲ್ಲಿ ಭೂಗತವಾಗಿ ಪಾರ್ಟಿ ಸಂಘಟನೆಯನ್ನು ಕಟ್ಟಬೇಕಾಯಿತು. ಕೇರಳದ ಮೂಲೆ, ಮೂಲೆಯಲ್ಲೂ ಕಮ್ಯುನಿಸ್ಟ್ ಪಕ್ಷಕ್ಕೆ ಜಯವಾಗಲಿ, ಕ್ರಾಂತಿ ಚಿರಾಯುವಾಗಲಿ, ಸಾಮ್ರಾಜ್ಯಶಾಹಿ ತೊಲಗಲಿ ಮುಂತಾದ ಹೊಸ ಘೋಷಣೆಗಳು ಕಾಣಿಸಿದವು. ಸ್ವಂತವಾಗಿ ಪತ್ರಿಕೆಗಳೂ, ಪ್ರಕಟಣೆಗಳೂ ಇಲ್ಲದ ಆ ಕಾಲದಲ್ಲಿ ಕೇರಳದ ಕಮ್ಯುನಿಸ್ಟ್ ಪಕ್ಷದ ಜನ್ಮ ಕೇರಳದ ಜನತೆಗೆ ಅರಿವಾದದ್ದು ಗೋಡೆ ಬರಹಗಳ ಮೂಲಕವೇ ಆಗಿತ್ತು.

1940 ರಲ್ಲಿ ಕಾಂ. ಪಿಳ್ಳೆಯವರನ್ನು ಜೈಲಿಗೆ ಹಾಕಿದರು. ಎರಡು ವರ್ಷಗಳ ಕಾಲ ಜೈಲುವಾಸ ಮಾಡಬೇಕಾಗಿ ಬಂತು. ಈ ಕಾಲದಲ್ಲಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಯಾಗಿ ಕಾಂ. ಇ. ಎಂ. ಎಸ್. ಕೆಲಸ ಮಾಡಿದರು. 1942ರಲ್ಲಿ ಬಿಡುಗಡೆ ಹೊಂದಿ ಹೊರಗೆ ಬಂದರು.

1946ರಲ್ಲಿ ನಡೆದ ಪ್ರಸಿದ್ಧವಾದ ವಯಲಾರ್ ಹೋರಾಟಕ್ಕೆ ನಾಯಕತ್ವ ಕೊಟ್ಟರು. ಅದೇ ವರ್ಷದಲ್ಲಿ ನಡೆದ ರೈಲ್ವೆ ನೌಕರರ ಐತಿಹಾಸಿಕ ಮುಷ್ಕರವನ್ನು ನಡೆಸುವುದರಲ್ಲಿ ಬಹುಮುಖ್ಯವಾದ ಪಾತ್ರವನ್ನು ವಹಿಸಿದರು. ಕಾರ್ಮಿಕರನ್ನು ಹುರಿದುಂಬಿಸಿ ಅವರಲ್ಲಿ ವರ್ಗ ಜಾಗೃತಿಯನ್ನು ತುಂಬಲು, ಕೇರಳದ ಅನೇಕ ಕಡೆಗಳಲ್ಲಿ ರಾಜಕೀಯ ತರಗತಿಗಳನ್ನು ನಡೆಸಿದರು.

1947ರಲ್ಲಿ ಮತ್ತೆ ಭೂಗತವಾಗಿ ಕೆಲಸಮಾಡಬೇಕಾಗಿಬಂತು. ಕೇರಳದಲ್ಲೇ ಇದ್ದು ಪಾರ್ಟಿ ಸಂಘಟನೆಯನ್ನು ಬಲಪಡಿಸುವ ಜವಾಬ್ದಾರಿ ಇವರ ಮೇಲೆ ಇದ್ದ ಕಾರಣ 1948ರ ಕಲ್ಕತ್ತಾ ಅಧಿವೇಶನದಲ್ಲಿ ಭಾಗವಹಿಸಲಾಗಲಿಲ್ಲ. ಆ ಅಧಿವೇಶನದಲ್ಲಿ ಪಾರ್ಟಿಯ ಕೇಂದ್ರ ಸಮಿತಿಗೆ ಚುನಾಯಿಸಲ್ಪಟ್ಟ ಕೇರಳದ ಪ್ರತಿನಿಧಿಗಳು ಕಾಂ. ಪಿ. ಕೃಷ್ಣಪಿಳ್ಳೆ, ಕಾಂ. ಇ. ಎಮ್.ಎಸ್. ಮತ್ತು ಕಾಂ. ಕೆ. ಸಿ. ಜಾರ್ಜ್ ಆಗಿದ್ದರು.

1948 ಆಗಸ್ಟ್ 19ರಂದು ಆಲಪ್ಪಿಯ ಮುಹಮ್ಮ ಎಂಬ ಸ್ಥಳದಲ್ಲಿ

[6ನೇ ಪುಟ ನೋಡಿ]

ಒಂದು ಅಪೂರ್ಣ ಕ್ರಾಂತಿಯ ಕಥೆ

—ವಿ. ರಾಜ್

[ಹಿಂದಿನ ಸಂಚಿಕೆಯಿಂದ]

ಕಾಂಗ್ರೆಸ್ 1934ರ ಚುನಾವಣೆಗಳಲ್ಲಿ ಭಾಗವಹಿಸಿತು. 1935 ರಲ್ಲಿ ಗವರ್ನ್‌ಮೆಂಟ್ ಆಫ್ ಇಂಡಿಯಾ ಆಕ್ಟ್ ಬಂತು. ಇದರ ಪ್ರಕಾರ ಮುಸ್ಲಿಮರಿಗೆ ಪ್ರತ್ಯೇಕ ಮತದಾರ ಕ್ಷೇತ್ರಗಳ ವ್ಯವಸ್ಥೆ ಇತ್ತು. ಇದನ್ನು ವಿರೋಧಿಸುವಷ್ಟು ಚೈತನ್ಯ ಈಗ ಕಾಂಗ್ರೆಸ್ಸಿಗಿರಲಿಲ್ಲ. ಇದರ ಪ್ರಕಾರ ನಡೆದ 1937 ರಲ್ಲಿ ನಡೆದ ಚುನಾವಣೆಗಳಲ್ಲಿ ಎಡಪಂಥೀಯ ವಿರೋಧವನ್ನು ಲೆಕ್ಕಿಸದೆ ಭಾಗವಹಿಸಿತು. ಮುಕ್ಕಾಲು ಭಾಗ ಮುಸ್ಲಿಂ ಸೀಟುಗಳನ್ನು ಸಹ ಪಡೆದು ಹೆಚ್ಚಿನ ಪ್ರಾಂತ್ಯಗಳಲ್ಲಿ ವಿಜಯಿಯಾಯಿತು. 1938ರಲ್ಲಿ ಪ್ರಾಂತೀಯ ಸರಕಾರಗಳು ರಚಿತವಾದವು. ಗವರ್ನ್‌ಮೆಂಟ್ ಆಫ್ ಇಂಡಿಯಾ ಆಕ್ಟನ್ನು ಒಳಗಿಂದ ಮುರಿಯುವ ಘೋಷಣೆಯೊಂದಿಗೆ ಚುನಾಯಿತವಾದ ಕಾಂಗ್ರೆಸ್ ಸರಕಾರಗಳು ಸಾಮೂಹಿಕ ಚಳುವಳಿಗಳನ್ನು, ಸಂಘಟನೆಗಳನ್ನು ವಿಸರ್ಜಿಸಲು ಜನತೆಗೆ ಉಪದೇಶ ಮಾಡತೊಡಗಿದವು. ಬಂಡವಾಳಶಾಹಿ ಜಮೀನುದಾರ ಪರವಾದ ಕ್ರಮಗಳನ್ನು ಅನುಸರಿಸತೊಡಗಿದವು. 1938ರಲ್ಲಿ ಮುಂಬಯಿಯ ಕಾಂಗ್ರೆಸ್ ಸರಕಾರ ಮುಷ್ಕರದ ಹಕ್ಕನ್ನು ಮುರಿಯುವ Industrial Disputes Act ತಂದಿತು. ಇದನ್ನು ಪ್ರತಿಭಟಿಸಿದ ಕಾರ್ಮಿಕವರ್ಗ ಕಾಂಗ್ರೆಸ್ ಸರಕಾರದ ಗುಂಡುಗಳನ್ನು ಎದುರಿಸಬೇಕಾಯಿತು. ಹಾಗೆಯೇ ಕಾಂಗ್ರೆಸ್‌ನ ಜಮೀನುದಾರ-ಪರ ನೀತಿಗಳಿಂದ ರೊಚ್ಚಿಗೆದ್ದ ರೈತರು ಪಾಟ್ನ, ಲಕ್‌ನೊಗಳಲ್ಲಿ ಪ್ರತಿಭಟನಾ ದಿನಗಳನ್ನು ಆಚರಿಸಿತು.

ಈ ಹೊತ್ತಿಗೆ ಎರಡನೆಯ ಮಹಾಯುದ್ಧ ಆರಂಭವಾಯಿತು. ಭಾರತವನ್ನು ಅದರ ಸಮ್ಮತಿ ಇಲ್ಲದೆ ಯುದ್ಧಕ್ಕೆಳೆದದ್ದಕ್ಕೆ ಜನ ರೊಚ್ಚಿಗೆದ್ದರು. ಆದರೆ ಸಾಮ್ರಾಜ್ಯಶಾಹಿ-ವಿರೋಧಿ, ಯುದ್ಧವಿರೋಧಿ ಸಾಮೂಹಿಕ ಚಳುವಳಿಗೆ ಕರೆ ಕೊಡಲು, 20 ರ ದಶಕದಲ್ಲಿ ಮತ್ತು 30ರ ದಶಕದಲ್ಲಿ ಸಾಮೂಹಿಕ ಚಳುವಳಿಯ ಕರೆಗೆ ಜನರ ಕ್ರಾಂತಿಕಾರಿ ಪ್ರತಿಕ್ರಿಯೆ ನೋಡಿದ್ದ ಬೂರ್ಜ್ವಾ ಕಾಂಗ್ರೆಸ್ ನಾಯಕರು ಬೆದರಿದರು. ತೀವ್ರ ಯುದ್ಧ ವಿರೋಧಿ ಭಾವನೆ ಇರುವಾಗ ಚಳುವಳಿಗೆ ಕರೆ ಕೊಟ್ಟರೆ ಚಳುವಳಿ ವ್ಯಾಪಕವಾದಾಗ ನಾಯಕತ್ವದಲ್ಲಿ ಕಾಂಗ್ರೆಸ್ ಉಳಿಯುವುದಿಲ್ಲ ಎಂದು ಅವರಿಗೆ ಮನದಟ್ಟಾಗಿತ್ತು. ಈ ಸಂದರ್ಭದಲ್ಲಿ ಯುದ್ಧದಲ್ಲಿ ಸಹಕರಿಸುವ ಆಸೆ ತೋರಿಸಿ ಕೆಲವು ಆಶ್ವಾಸನೆಗಳನ್ನು ಗಿಟ್ಟಿಸುವ ಉಪಾಯ ಕಾಂಗ್ರೆಸ್ಸಿನದಾಗಿತ್ತು. ಆದರೆ ಇಂತಹ ಯಾವುದೇ ಆಶ್ವಾಸನೆಯನ್ನು ಬ್ರಿಟಿಷರು ಕೊಡಲಿಲ್ಲ. ಇದರಿಂದಾಗಿ 1939ರಲ್ಲಿ ಎಲ್ಲಾ ಪ್ರಾಂತೀಯ ಕಾಂಗ್ರೆಸ್ ಸರಕಾರಗಳು ರಾಜೀನಾಮೆ ಕೊಟ್ಟವು. ಸಾಮೂಹಿಕ ಚಳುವಳಿಗೆ ಹೆದರುವ ಕಾಂಗ್ರೆಸ್ ಪುನಃ ಸೀಮಿತ ವೈಯಕ್ತಿಕ ಸತ್ಯಾಗ್ರಹಕ್ಕೆ ಕರೆ ನೀಡಿತು. (1940), 1941ರಲ್ಲಿ ಯೂರೋಪಿನ ಮೇಲೆ ವಿಜಯ ಸಾಧಿಸಿದ ಜರ್ಮನಿ ಪ್ರಥಮ ಸಮಾಜವಾದಿ ದೇಶವಾದ ಸೋವಿಯೆತ್ ರಷ್ಯಾದ ಮೇಲೆ ಭಾರಿ ಧಾಳಿ ನಡೆಸುವುದರೊಂದಿಗೆ ಮಹಾಯುದ್ಧದ ಚರಿತ್ರವೇ ಬದಲಾಯ್ತು. ಪ್ರಗತಿಪರ ಶಕ್ತಿಗಳು ಯುದ್ಧದ ಬಗ್ಗೆ ಉದಾಸೀನಧೋರಣೆ ತಳೆದರೆ ಜರ್ಮನಿ ಪ್ರತಿನಿಧಿಸಿದ ಫ್ಯಾಸಿಸ್ಟ್ ಶಕ್ತಿಗಳು ಗೆಲ್ಲುವ ಮತ್ತು ಅದಾದ ಮೇಲೆ ಇಡೀ ಜಗತ್ತಿನ ಮೇಲೆ ಆರ್ಥಿಕ ಬಂಡವಾಳ (Finance capital)ದ ಮಿಲಿಟರಿ ಆಡಳಿತದ ಕರಾಳಛಾಯೆ ಹಬ್ಬುವ ಸಂಭವವಿತ್ತು.. ಇಂತಹ ಪರಿಸ್ಥಿತಿ ಸಮಾಜವಾದಿಯೇ ಏಕೆ, ಪ್ರಜಾಸತ್ತಾತ್ಮಕ ಸ್ವಾತಂತ್ರ್ಯ ಹೋರಾಟಕ್ಕೂ ಅಪಾಯಕಾರಿಯಾದದ್ದು. ಇದನ್ನು ಕಾಂಗ್ರೆಸ್, ಕಮ್ಯುನಿಸ್ಟ್ ಪಕ್ಷಗಳೆರಡೂ ಗುರುತಿಸಿದವು. ಆದರೆ ಕಾಂಗ್ರೆಸ್ ಈ ಪರಿಸ್ಥಿತಿಯನ್ನು ಸಾಮೂಹಿಕ ಚಳುವಳಿಯಿಲ್ಲದೆ ಬ್ರಿಟಿಷರನ್ನು ಮಣಿಸುವ ಸುವರ್ಣ ಸಂದರ್ಭವೆಂದು ಬಗೆಯಿತು. ಏಶ್ಯಾದಲ್ಲೂ ಭಾರಿ ಮುನ್ನಡೆ ಸಾಧಿಸಿದ್ದ ಫ್ಯಾಸಿಸ್ಟ್ ಶಕ್ತಿಗಳ ವಿಜಯ ಖಚಿತವೆಂದು ತಿಳಿದು, 1942ರ ಚಾರಿತ್ರಿಕ ಆಗಸ್ಟ್ ನಿರ್ಣಯದಲ್ಲಿ ರಷ್ಯಾ, ಚೀನಾಗಳ ರಕ್ಷಣೆಯನ್ನು, ಫ್ಯಾಸಿಸ್ಟ್ ವಿರೋಧಿ ಹೋರಾಟವನ್ನು ಯಾವುದೇ ರೀತಿಯಲ್ಲಿ ದುರ್ಬಲಗೊಳಿಸುವ ಇಚ್ಛೆ ತನಗಿಲ್ಲವೆಂದೂ, ಆದರೆ ಈ ಯುದ್ಧಕ್ಕೆ ಸಕ್ರಿಯ ಸಹಾಯ ನೀಡಬೇಕಾದರೆ ಭಾರತದಲ್ಲಿ ರಾಷ್ಟ್ರೀಯ ಸರ್ಕಾರ ರಚಿಸಬೇಕು ಮತ್ತು ಇಲ್ಲದಿದ್ದಲ್ಲಿ ತಾನು ದೊಡ್ಡ ಪ್ರಮಾಣದ ಅಸಹಕಾರ ಚಳುವಳಿಗೆ ಕರೆ ನೀಡುವುದಾಗಿ ಕಾಂಗ್ರೆಸ್ ತಿಳಿಸಿತು. ಬೆದರಿಕೆ ರೂಪದಲ್ಲಿದ್ದ ಈ ನಿರ್ಣಯದಿಂದ ಕುಪಿತರಾದ ಬ್ರಿಟೀಷರು ಕಾಂಗ್ರೆಸ್‌ನ ಎಲ್ಲಾ ನಾಯಕರನ್ನು ಬಂಧಿಸಿ, ದೊಡ್ಡ ಪ್ರಮಾಣದ ದಮನ ಆರಂಭಿಸಿದರು. ಇದರಿಂದ ರೊಚ್ಚಿಗೆದ್ದ ಜನತೆ ದೊಡ್ಡ ಪ್ರಮಾಣದ ಹಿಂಸಾಚಾರಕ್ಕೆ ತೊಡಗಿತು. ಈ ನಾಯಕರಿಲ್ಲದ ಉದ್ದೇಶವಿಲ್ಲದ ಚಳುವಳಿ 2-3 ದಿನಗಳು ನಡೆಯಿತು. ಇದು 'ಆಗಸ್ಟ್ ಚಳುವಳಿ' ಎಂದು ಹೆಸರಾಗಿದೆ.

ಆದರೆ 1945ರ ಸುಮಾರಿಗೆ ರಷ್ಯಾ ಜರ್ಮನಿಯನ್ನು ಹಿಮ್ಮೆಟ್ಟಿಸಿದ್ದರಿಂದ ಫ್ಯಾಸಿಸ್ಟ್ ಶಕ್ತಿಗಳಿಗೆ ಸೋಲಾಗುವುದು ಖಚಿತವಾಯಿತು. ಈಗ ಬಿಡುಗಡೆಯಾದ ಕಾಂಗ್ರೆಸ್ ನಾಯಕರು ಬ್ರಿಟೀಷರೊಂದಿಗೆ ರಾಜಿ ಮಾತುಕತೆ ಆರಂಭಿಸಿದರು. ಇದರಿಂದಾಗಿ ಸಿಮ್ಲಾ ಸಮ್ಮೇಳನವನ್ನು ಕರೆಯಲಾಯಿತು. ರಾಷ್ಟ್ರೀಯ ಸರ್ಕಾರ ರಚನೆಗಾಗಿ ಕರೆದಿದ್ದ ಈ ಸಮ್ಮೇಳನದಲ್ಲಿ ಎಂದಿನಂತೆ ಮತೀಯ ಆಧಾರದ ಮೇಲೆ ಸೀಟು ಹಂಚಿಕೆ ವಿಷಯದಲ್ಲಿ ಲೀಗ್-ಕಾಂಗ್ರೆಸ್ ಇಬ್ಬರಿಗೂ ಒಪ್ಪಿಗೆಯಾಗದ ಸಲಹೆಗಳನ್ನು ಮಂಡಿಸಿ ಸಮ್ಮೇಳನ ವಿಫಲವಾಗುವಂತೆ ಬ್ರಿಟೀಷರು ಕುತಂತ್ರ ನಡೆಸಿದರು.

ಎರಡನೆಯ ಮಹಾಯುದ್ಧದ ನಂತರ ಜಗತ್ತಿನಾದ್ಯಂತ ಪುನಃ ಕ್ರಾಂತಿಕಾರಿ ಹೋರಾಟಗಳ ಅಲೆ ಆರಂಭವಾಯಿತು. ಈ ಅವಧಿಯಲ್ಲಿ ಭಾರತದಲ್ಲಿ ಎರಡು ಮುಖ್ಯ ಹೋರಾಟಗಳು ನಡೆದವು. ಆಗ್ನೇಯ ಏಶ್ಯಾದ ವಿಮುಕ್ತಿ ಹೋರಾಟವನ್ನು ಹತ್ತಿಕ್ಕಲು ಸೈನ್ಯ ಕಳಿಸಿದ್ದು ಮತ್ತು ಆಜಾದ್ ಹಿಂದ್ ಸೇನೆಯ ಅಧಿಕಾರಿಗಳ ವಿಚಾರಣೆ-ಇವೆರಡರ ವಿರುದ್ಧ ಇಡೀ ದೇಶವೇ ಒಂದಾಗಿ ಪ್ರತಿಭಟಿಸಿತು. 1946ರಲ್ಲಿ ಭಾರತೀಯ ವಾಯು ಸೈನ್ಯದಲ್ಲಿ ವರ್ಣಭೇದ ನೀತಿಯ ವಿರುದ್ಧ ಮುಷ್ಕರ, ಮುಂಬಯಿಯಲ್ಲಿ ಆಸ್ಫೋಟಿಸಿ ದೇಶದ ಎಲ್ಲಾ ಭಾಗಗಳಿಗೆ ಹರಡಿದ ರಾಯಲ್ ಇಂಡಿಯನ್ ನೇವಿಯ ಸೈನಿಕರ ಪೂರ್ಣಪ್ರಮಾಣದ ಐತಿಹಾಸಿಕ ದಂಗೆ ಮತ್ತು ಕಾರ್ಮಿಕ ವರ್ಗದ ಕ್ರಾಂತಿಕಾರಿ ಮತ್ತು ರಾಜಕೀಯ ಮುಷ್ಕರಗಳು ಬ್ರಿಟೀಷ್ ಸರ್ಕಾರದ ಬುಡವನ್ನೇ ಅಲುಗಾಡಿಸಿದವು. ಇದರಿಂದಾಗಿ ಬೆದರಿದ ಬ್ರಿಟೀಷರು ಮತ್ತು ಕಾಂಗ್ರೆಸ್ ನಾಯಕರು ರಾಜಿ ಮಾತುಕತೆ ಪುನಃ ಆರಂಭಿಸಿದರು. ಕಾಂಗ್ರೆಸ್ ನಾಯಕರು ಯಾವುದೇ ರೀತಿಯ ಅಧಿಕಾರದ ಹಸ್ತಾಂತರಕ್ಕೆ ಸಿದ್ಧವಿದ್ದರು. ಬ್ರಿಟೀಷ್ ಪ್ರಧಾನಿ ಆ್ಯಟ್ಲಿ ಕಳಿಸಿದ ಕ್ಯಾಬಿನೆಟ್ ಸಮಿತಿ 3 ವಿಭಾಗಗಳಿರುವ ಫೆಡರಲ್ ದೇಶ ಮಾಡುವ ಸೂಚನೆ ಇತ್ತಿತು. ಇದಕ್ಕೆ ಲೀಗ್‌ನ ನಿರೀಕ್ಷೆಗೆ ವಿರುದ್ಧವಾಗಿ ಕಾಂಗ್ರೆಸ್ ಒಪ್ಪಿಕೊಂಡಿತು. ಮಧ್ಯಂತರ ಸರಕಾರ ರಚಿಸುವ ಆತುರದಲ್ಲಿದ್ದ ಕಾಂಗ್ರೆಸ್ಸನ್ನು ನೆಹ್ರೂರವರ ನಾಯಕತ್ವದಲ್ಲಿ ಬ್ರಿಟೀಷರನ್ನು ಅದಕ್ಕಾಗಿ ಆಹ್ವಾನ ನೀಡಿದಾಗ ಮುಸ್ಲಿಂ ಲೀಗ್ ತನ್ನ ನೀತಿ ಬದಲಿಸಿ ಪ್ರತ್ಯೇಕ ಪಾಕಿಸ್ತಾನ ರಚನೆಗೆ "Direct Action day"ಗೆ ಕೂಗು ಹಾಕಿತು. ಈ ಕೂಗಿನಿಂದ ಕಲ್ಕತ್ತಾ, ನೌಖಾಲ ಮತ್ತು ಬಿಹಾರದ ಹಲವು ಕಡೆ ದೊಡ್ಡ ಪ್ರಮಾಣದ ಮತೀಯ ಗಲಭೆಗಳು ನಡೆದವು. ಕೊನೆಗೆ ಲೀಗ್ ಸಹ ಮಧ್ಯಂತರ ಸರಕಾರದಲ್ಲಿ ಭಾಗವಹಿಸಿತು. ಅಲ್ಲೂ ಕಾಂಗ್ರೆಸ್-ಲೀಗ್‌ಗಳ ವಿವಾದ, ಜಗಳಗಳು ಮುಂದುವರಿದವು. ಈ ಪರಿಸ್ಥಿತಿಯ ಪೂರ್ಣಲಾಭ ಪಡೆದ ಬ್ರಿಟೀಷರು, ಪಾಕಿಸ್ತಾನ,ಭಾರತ ವಿಭಜನೆಯ ಸಲಹೆ ಮುಂದಿಟ್ಟರು. ಉದ್ದಕ್ಕೂ ಬ್ರಿಟೀಷರು ಮತ್ತು ಮತೀಯ ಶಕ್ತಿಗಳನ್ನು ಪ್ರತಿನಿಧಿಸಿದ್ದ ಮುಸ್ಲಿಂ ಲೀಗ್‌ನೊಂದಿಗೆ ರಾಜಿಮನೋಭಾವ ತೋರಿದ್ದ ಕಾಂಗ್ರೆಸ್‌ಗೆ ವಿಭಜನೆಯನ್ನು ವಿರೋಧಿಸುವ ಚೈತನ್ಯವಾಗಲಿ, ದೃಢ ರಾಜಕೀಯ ನಿರ್ಧಾರವಾಗಲಿ ಇರದಿದ್ದರಿಂದ ವಿಭಜನೆಯ ಈ ದುರಂತ ನಡೆದು ಹೋಯಿತು.

ಇದು ಬೂರ್ಜ್ವಾ ವರ್ಗದ ರಾಜಕೀಯ ಪಕ್ಷದ ನಾಯಕತ್ವದಲ್ಲಿದ್ದ ನಮ್ಮ ರಾಷ್ಟ್ರೀಯ ಚಳುವಳಿಯ ಸ್ಥೂಲರೂಪುರೇಷೆ. ಇದರಿಂದ ನಿಸ್ಸಂದೇಹವಾಗಿ ತಿಳಿಯುವ ವಿಷಯವೆಂದರೆ ಈ ಚಳುವಳಿಯ ನಾಯಕತ್ವದಲ್ಲಿದ್ದ ಬೂರ್ಜ್ವಾ ವರ್ಗ ಬ್ರಿಟೀಷರೊಂದಿಗೆ ಸಾಮೂಹಿಕ ಚಳುವಳಿಯ ಬದಲು, ಸಾಧ್ಯವಾದಾಗಲೆಲ್ಲ ಚೌಕಾಶಿ ಮತ್ತು ರಾಜಿಮನೋಭಾವ ತೋರಿದ್ದೇ ಚಳುವಳಿಯ ಮುಖ್ಯ ಕೊರತೆಯಾಗಿತ್ತು. ಈ ವರ್ಗ ತನ್ನ ಕ್ಷುಲ್ಲಕ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಬ್ರಿಟೀಷ್ ಸಾಮ್ರಾಜ್ಯಶಾಹಿಗಳೊಂದಿಗೆ ಹಾಗೂ ಸ್ಥಳೀಯ ರಾಜರು ಮತ್ತು ಜಮೀನುದಾರರೊಂದಿಗೆ ರಾಜಿ ಮನೋಭಾವ ತೋರಿತು ಆದರೆ ತನ್ನ ಕೈಗೆ ರಾಜ್ಯಾಧಿಕಾರ ಬರಲು, ನಗರದ ಕಾರ್ಮಿಕರ ಹಳ್ಳಿಗಳ ರೈತರ ಸಾಮೂಹಿಕ ಚಳುವಳಿಯನ್ನು ಒಂದು ಅಸ್ತ್ರವಾಗಿ ಬಳಸಿತು. ಅದು ದುಡಿಯುವ ಜನರ ಚಳುವಳಿ ತನ್ನ ವರ್ಗ ಹಿತಾಸಕ್ತಿಗೆ ವಿರುದ್ಧವಾಗಿ ಹೋದಾಗಲೆಲ್ಲ ಚಳುವಳಿಯನ್ನೇ ಹಿಂದೆಗೆಯಲು ಹೇಸಲಿಲ್ಲ. 1921 ರ ಚೌರಿಚೌರಾದ ಘಟನೆಗಳನಂತರ ಅಸಹಕಾರ ಚಳುವಳಿಯ ಹಿಂತೆಗೆಯುವಿಕೆ, 1929 ರ ರೈತ ಕಾರ್ಮಿಕರ, ಸೈನಿಕರ ದಂಗೆಯ ಹಿನ್ನೆಲೆಯಲ್ಲಿ ಸವಿನಯ ಕಾಯಿದೆ ಭಂಗ ಚಳುವಳಿಯ ಹಿಂತೆಗೆಯುವಿಕೆ ಇವೆಲ್ಲಾ ಇದಕ್ಕೆ ಉದಾಹರಣೆ ಗಾಂಧಿಜೀಯ ಆದರ್ಶವಾದ ಮತ್ತು ಅಹಿಂಸಾತ್ಮಕ ಪ್ರತಿಭಟನೆ. ವೈಯಕ್ತಿಕ ಸತ್ಯಾಗ್ರಹ ಮುಂತಾದವುಗಳು ರೈತ ಕಾರ್ಮಿಕರನ್ನು ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದಲ್ಲಿ ಬೂರ್ಜ್ವಾ ವರ್ಗಕ್ಕೆ ಸಾಮ್ರಾಜ್ಯಶಾಹಿಗಳೊಂದಿಗೆ ಚೌಕಾಶಿ ಮಾಡಲು ಸಿಗುವಷ್ಟು ಮಟ್ಟಿಗೆ ವ್ಯಾಪಕವಾಗಿ, ಆದರೆ ಈ ಭಾಗವಹಿಸುವಿಕೆ ಸ್ವತಂತ್ರ ಕ್ರಾಂತಿಕಾರಿ ಚಟುವಟಿಕೆಯಾಗದಂತೆ ತಡೆಗಟ್ಟುವಂತೆ ಮಾಡುವುದರಲ್ಲಿ ಬೂರ್ಜ್ವಾಗಳಿಗೆ ಬಹಳ ಸಹಕಾರಿಯಾದವು. ಆದ್ದರಿಂದಲೇ ಗಾಂಧೀಜಿ ಬೂರ್ಜ್ವಾಗಳ ಮಹಾನಾಯಕ, 'ರಾಷ್ಟ್ರಪಿತ'ರಾದರು.

ಹಾಗೆಯೇ ರಾಷ್ಟ್ರೀಯ ಚಳುವಳಿಯ ಮೊದಲ ಘಟ್ಟದ ಬೂರ್ಜ್ವಾ ಕಾಂಗ್ರೆಸ್ ನಾಯಕರು (ತಿಲಕ್ ಮೊದಲಾದ) ಸ್ವತಃ ಹಿಂದೂ ಮತಾಂಧರಾಗಿದ್ದುದು, ರಾಷ್ಟ್ರೀಯ ಚಳುವಳಿಗೆ ಮುಸ್ಲಿಮರನ್ನು ಆಕರ್ಷಿತರಾಗದಂತೆ ಮತ್ತು ಮುಸ್ಲಿಂ ಲೀಗ್ ಸ್ಥಾಪಿಸಿ ಅದರ ಮೂಲಕ ರಾಷ್ಟ್ರೀಯ ಚಳುವಳಿಯ ಐಕ್ಯವನ್ನು ನಿರ್ಣಾಯಕ ಘಟ್ಟಗಳಲ್ಲಿ ಮುರಿಯಲು ಬ್ರಿಟಿಷರಿಗೆ ಸದವಕಾಶ ಮಾಡಿಕೊಟ್ಟಿತು. ರಾಷ್ಟ್ರೀಯ ಚಳುವಳಿಯ ಮುಂದಿನ ಘಟ್ಟಗಳ ನಾಯಕರು ಮುಸ್ಲಿಂ ಲೀಗ್ ಪ್ರತಿನಿಧಿಸಿದ ಮತೀಯ ಶಕ್ತಿಗಳೊಂದಿಗೆ ಸೈದ್ಧಾಂತಿಕ ಹೋರಾಟ ನಡೆಸದೆ ರಾಜಿ ಮಾಡಿಕೊಂಡಿದ್ದು ಇದಕ್ಕೆ ಸಹಾಯಕವಾಯಿತು. 1919 ಮಿಂಟೊಮಾರ್ಲೆ ಸುಧಾರಣೆಗಳು, 1935ರ ಗವರ್ನ್‌ಮೆಂಟ್ ಆಫ್ ಇಂಡಿಯಾ ಕಾಯಿದೆ, 1946ರ ಸಿಮ್ಲಾ ಸಮ್ಮೇಳನದಲ್ಲಿ ಮತೀಯ ಶಕ್ತಿಗಳಿಗೆ ಮತ್ತು ಬ್ರಿಟಿಷ್ ಕುತಂತ್ರಕ್ಕೆ ಕಾಂಗ್ರೆಸ್ ಮಣಿದದ್ದು ಹಿಂದೂ-ಮುಸ್ಲಿಂ ಸಮಸ್ಯೆ ಹುಟ್ಟಿ ಬೆಳೆದು, 47ರ ಹೊತ್ತಿಗೆ ಹೃದಯವಿದ್ರಾವಕವಾದ ರೀತಿಯಲ್ಲಿ ಆಸ್ಫೋಟಿಸಿ ದೇಶದ ವಿಭಜನೆ ಮತ್ತು ಅದರ ದುರಂತಗಳಿಗೆ ಕಾರಣವಾಯಿತು. 19ನೇ ಶತಮಾನದಲ್ಲಿ ರಾಷ್ಟ್ರೀಯ ಚಳುವಳಿಯ ಆರಂಭವಾಗುವ ಮೊದಲು ಹಿಂದೂ-ಮುಸ್ಲಿಂ ಐಕ್ಯತೆ ಒಂದು ಸಮಸ್ಯೆಯೇ ಆಗಿರಲಿಲ್ಲ ಎಂದು ಗಮನಿಸಬೇಕು. ಕೊನೆಯ ಗಳಿಗೆಯಲ್ಲೂ ಯೇನಕೇನ ಪ್ರಕಾರೇಣ ಮಧ್ಯಂತರ ಸರಕಾರ ನಡೆಸುವ ಕಾಂಗ್ರೆಸ್‌ನ ಆತುರವೇ ವಿಭಜನೆಗೆ ಮುಖ್ಯ ಕಾರಣವಾಯಿತು.

ಕಾಂಗ್ರೆಸ್‌ನ ಸಾಮ್ರಾಜ್ಯಶಾಹಿಗಳೊಂದಿಗೆ ರಾಜಿ ಮನೋಭಾವ ಮುರಿಯಲು ಮತ್ತು ಇಂತಹ ಮನೋಭಾವದಿಂದ ತೀವ್ರ ಚಳುವಳಿಗಳ ಹಿಂತೆಗೆದುಕೊಳ್ಳುವಿಕೆಯ ಸಮಯದಲ್ಲಿ ಉಂಟಾದ ನಿರಾಶೆಯ ವಾತಾವರಣದಲ್ಲಿ ರಾಷ್ಟ್ರೀಯ ಚಳುವಳಿಗೆ ಚೇತನ ತುಂಬುವ ಕಾರ್ಯದಲ್ಲಿ ಹಲವು ಕಾಂಗ್ರೆಸ್ಸೇತರ ರಾಷ್ಟ್ರೀಯವಾದಿಗಳು ಪ್ರಮುಖ ಪಾತ್ರ ವಹಿಸಿದರು. ಇದರಲ್ಲಿ ದುಡಿಯುವ ವರ್ಗಗಳ ಪಕ್ಷದ ಕಮ್ಯುನಿಸ್ಟ್ ಪಕ್ಷದ ಪಾತ್ರ ಬಹುಮುಖ್ಯ. 1917ರ ರಶ್ಯನ್ ಕ್ರಾಂತಿಯ ನಂತರದ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟದ ಅಲೆಯಲ್ಲಿ ಹುಟ್ಟಿದ ಕಮ್ಯುನಿಸ್ಟ್ ಪಕ್ಷ ಕೂಡಲೇ ದುಡಿಯುವವರ್ಗಗಳ ಪ್ರತಿನಿಧಿಯಾಗಿ ರಾಷ್ಟ್ರೀಯ ಚಳುವಳಿಯಲ್ಲಿ ತನ್ನ ಪಾತ್ರ ನಿರ್ವಹಿಸಲು ಆರಂಭಿಸಿತು. 1921 ರಷ್ಟು ಹೊತ್ತಿಗೆ, ಕಾಂಗ್ರೆಸ್ಸು ತನ್ನ ತಾತ್ಕಾಲಿಕ ಉತ್ಸಾಹದ ಮತ್ತು ಸವಿನಯ ನಿರ್ಣಯಗಳ ಕಾರ್ಯಕ್ರಮಗಳನ್ನು ಬಿಟ್ಟು, ರೈತರ, ಕಾರ್ಮಿಕರ ಮತ್ತು ಇತರ ಜನವಿಭಾಗಗಳ ಆರ್ಥಿಕ ಬೇಡಿಕೆಗಳನ್ನು ಮುಖ್ಯ ಕಾರ್ಯಕ್ರಮವಾಗಿ ತೆಗೆದುಕೊಂಡು ಸಾಮೂಹಿಕ ಚಳುವಳಿ ನಡೆಸುವುದೇ ಸ್ವಾತಂತ್ರ್ಯಗಳಿಸಲು ಸರಿಯಾದ ಮಾರ್ಗ ಎಂದು ಕಾಂಗ್ರೆಸ್‌ಗೆ ಕರೆಯಿತ್ತಿತ್ತು. 1922-28ರ ನಿರಾಶಾದಾಯಕ ವಾತಾವರಣದಲ್ಲಿ ಕಾನ್‌ಪುರ ಬೊಲ್ಶೆವಿಕ್ ಪಿತೂರಿ, ಮತ್ತು ಪೇಶಾವರ ಪಿತೂರಿ ಮೊಕದ್ದಮೆಗಳ ಮೂಲಕ ನಡೆಸಿದ ಬ್ರಿಟಿಷ್ ದಮನವನ್ನು ಲೆಕ್ಕಿಸದೆ ಕಾರ್ಮಿಕವರ್ಗ, ರೈತವರ್ಗ ವಿದ್ಯಾರ್ಥಿಗಳನ್ನು, ಸಾಮೂಹಿಕ ಸಂಘಟನೆಗಳಲ್ಲಿ ಸಂಘಟಿಸುವ ಕೆಲಸವನ್ನು ಮಾಡಿತು. ಅಷ್ಟೇ ಅಲ್ಲ ಕಾಂಗ್ರೆಸ್‌ನೊಳಗೆ ತನ್ನ ಪ್ರಭಾವ ಬೀರಿ ಕಾಂಗ್ರೆಸ್ಸನ್ನು ರಾಜಿಮನೋಭಾವದಿಂದ ಸಾಮೂಹಿಕ ಚಳುವಳಿಯತ್ತ ತಿರುಗಿಸಲು ಪ್ರಯತ್ನಿಸಿ ಸಾಕಷ್ಟು ಪ್ರಮಾಣದಲ್ಲಿ ಸಫಲವಾಯಿತು. 1930ರ ಗಾಂಧಿ-ಇರ್ವಿನ್ ಒಪ್ಪಂದದ ನಂತರ ಇದರಿಂದ ಬೇಸತ್ತ ಕ್ರಾಂತಿಕಾರಿ ರಾಷ್ಟ್ರೀಯವಾದಿ ಕಾಂಗ್ರೆಸ್ ಯುವಕ ನಾಯಕರನ್ನು ಸೇರಿಸಿ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷ ಸ್ಥಾಪಿಸುವುದರಲ್ಲೂ ಪಕ್ಷದ ಪಾತ್ರ ಮಹತ್ತರವಾದುದು. ಎರಡನೆಯ ಮಹಾಯುದ್ಧದ ಸಮಯದಲ್ಲಿ ನಾಗಪುರದಲ್ಲಿ ಸಾಮ್ರಾಜ್ಯಶಾಹಿ-ವಿರೋಧಿ ಸಮ್ಮೇಳನ ಕರೆಯುವ

ಮೂಲಕ, ಮುಂದೆ ಯುದ್ಧದ ಚರಿತ್ರೆ ಬದಲಾದಾಗ ರಾಷ್ಟ್ರೀಯ ಚಳುವಳಿಯ ಧೋರಣೆಯನ್ನು ಸರಿಯಾಗಿ ರೂಪಿಸುವ ಪ್ರಯತ್ನದಲ್ಲಿ ಸಹ ಪಕ್ಷ ತನ್ನ ಪಾತ್ರವನ್ನು ಸರಿಯಾಗಿ ನಿರ್ವಹಿಸಿತು.

ಕಾರ್ಮಿಕರ, ರೈತರ, ವಿದ್ಯಾರ್ಥಿಗಳ, ಬರಹಗಾರರ, ಬುದ್ಧಿಜೀವಿಗಳ ಸಾಮೂಹಿಕ ಸಂಘಟನೆಗಳನ್ನು ಕಟ್ಟಿ ಇವುಗಳಿಂದಾದ ಸಾಮ್ರಾಜ್ಯಶಾಹಿ-ವಿರೋಧಿ ರಾಷ್ಟ್ರೀಯ ಐಕ್ಯರಂಗ ಕಟ್ಟುವುದು ಕಮ್ಯುನಿಸ್ಟ್ ಪಕ್ಷದ ಮುಖ್ಯ ನಿಲುವಾಗಿತ್ತು. ಇದಕ್ಕಾಗಿ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್, ಆಲ್ ಇಂಡಿಯಾ ಕಿಸಾನ್ ಸಭಾ, ಆಲ್ ಇಂಡಿಯಾ ಸ್ಟೂಡೆಂಟ್ಸ್ ಫೆಡರೇಷನ್, ಆಲ್ ಇಂಡಿಯಾ ಪ್ರೋಗ್ರೇಸಿವ್ ರೈಟರ್ಸ್ ಎಸೋಸಿಯೇಶನ್ ಮುಂತಾದ ಸಾಮೂಹಿಕ ಸಂಘಟನೆಗಳನ್ನು ಕಟ್ಟಿತು. ಕಾಂಗ್ರೆಸ್ಸನ್ನೇ ಸಾಮ್ರಾಜ್ಯಶಾಹಿ ವಿರೋಧಿ ಐಕ್ಯರಂಗವಾಗಿ ಪರಿವರ್ತಿಸಲು ಪಕ್ಷ ಶಕ್ತಿಮೀರಿ ಪ್ರಯತ್ನಿಸಿತು. ಇದಕ್ಕೆ ಕಾಂಗ್ರೆಸ್ ಸೋಶಲಿಸ್ಟ್ ಹಲವು ನಾಯಕರ ಸಹಕಾರ ಇತ್ತು. ಕಾಂಗ್ರೆಸ್‌ನ ಬೂರ್ಜ್ವಾ ನಾಯಕರು ಮಾತ್ರ ಇಂತಹ ಎಲ್ಲ ಪ್ರಯತ್ನಗಳನ್ನು ವ್ಯವಸ್ಥಿತವಾಗಿ ಬುಡಮೇಲು ಮಾಡಿದರು. A. I. C. C. ಗೆ ಸದಸ್ಯರನ್ನು ನೇಮಿಸುವ ಕ್ರಮ ಮತ್ತು ಇತರ ಹಲವಾರು ಹೇಯವಾದ ವಿಧಾನಗಳಿಂದ ಕಾಂಗ್ರೆಸ್‌ನಲ್ಲಿ ಎಡಶಕ್ತಿ ಪ್ರಭಲವಾಗುವುದನ್ನು ತಡೆಗಟ್ಟಿದರು ತ್ರಿಪುರಾ ಅಧಿವೇಶನದಲ್ಲಿ ಸುಭಾಶ್‌ಚಂದ್ರ ಬೋಸರು ಅಧ್ಯಕ್ಷರಾಗಿ ಆಯ್ಕೆ ಮತ್ತು ಗಾಂಧೀಜಿಯ ಕುತಂತ್ರಗಳಿಂದ ಅವರ ರಾಜಿನಾಮೆಯೊಂದಿಗೆ ಕಾಂಗ್ರೆಸ್ ಇಂತಹ ಐಕ್ಯರಂಗವಾಗುವ ಎಲ್ಲ ಪ್ರಯತ್ನಗಳು ಕೊನೆಗೊಂಡವು. ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದ ಕೆಲವು ಬಲಪಂಥೀಯ ನಾಯಕರ ಧೋರಣೆ ಸಹ ಎಡಶಕ್ತಿಗಳ ಐಕ್ಯತೆ ಮತ್ತು ಇದರಿಂದ ಸುಲಭವಾಗಬಹುದಾಗಿದ್ದ ರಾಷ್ಟ್ರೀಯ ಐಕ್ಯರಂಗದ ಸ್ಥಾಪನೆಯ ಪ್ರಯತ್ನಗಳನ್ನು ವಿಫಲ ಮಾಡಿತು.

ಕಾಂಗ್ರೆಸ್ ತಾನಾಗಿ ರಾಷ್ಟ್ರೀಯ ಐಕ್ಯರಂಗವಾಗಲು ಪ್ರಯತ್ನಿಸದ್ದು ಮತ್ತು ಇತರರ ಪ್ರಯತ್ನಗಳನ್ನು ವಿಫಲಗೊಳಿಸಲು ಎಲ್ಲಾ ಪ್ರಯತ್ನ ಮಾಡಿದ್ದು ಇನ್ನೂ ಹಲವು ರಾಷ್ಟ್ರೀಯ ಚಳುವಳಿಯ ನ್ಯೂನ್ಯತೆಗಳಿಗೆ ಕಾರಣವಾಯಿತು. ರಾಷ್ಟ್ರೀಯ ಚಳುವಳಿಯುದ್ದಕ್ಕೂ ಕಾಂಗ್ರೆಸ್‌ಗೆ ಸಮಾಂತರವಾಗಿ ಬ್ರಿಟೀಷರನ್ನು ಸಶಸ್ತ್ರ ಹೋರಾಟದಿಂದ ಓಡಿಸಲು ಸಂಘಟನೆಗಳನ್ನು ಕಟ್ಟಿಕೊಂಡ ಮಧ್ಯಮವರ್ಗದ ಕ್ರಾಂತಿಕಾರಿಗಳು ರಾಷ್ಟ್ರೀಯ ಚಳುವಳಿಯ ಮುಖ್ಯಧಾರೆಯಿಂದ ಹೊರಗಿದ್ದು, ಅವರಿಂದ ಸಿಗಬಹುದಾಗಿದ್ದ ಅಮೂಲ್ಯ ಕೊಡುಗೆಯಿಲ್ಲದ ಚಳುವಳಿ ಅಷ್ಟರ ಮಟ್ಟಿಗೆ ಬಡವಾಗುವಂತೆ ಆಯಿತು. ಇಂತಹ ಸಂಘಟನೆಗಳಲ್ಲಿ ಮುಖ್ಯವಾದುವು 1906 ರಲ್ಲಿ ಗಲ್ಲಿಗೇರಿದ ಖುದಿರಾಮ ಬೋಸ್‌ನ ತಂಡ, 1915 ರಲ್ಲಿ ಕಾರ್ಯಮುಖವಾಗಿದ್ದ ಗದರ್‌ಪಕ್ಷ. 1917 ರಲ್ಲಿ ಜರ್ಮನಿಯ ಸಹಾಯದಿಂದ ಕಾಬೂಲಿನಲ್ಲಿ 'ಸ್ವತಂತ್ರ ಭಾರತದ' ಸರ್ಕಾರ ಸ್ಥಾಪಿಸಿದ ಬರ್ಖತುಲ್ಲಾ, ರಾಜಾಮಹೇಂದ್ರ ಪ್ರತಾಪ್ ಮುಂತಾದವರ ತಂಡ, 20ರ ದಶಕದಲ್ಲಿ ವ್ಯಾಪಕವಾಗಿ ಹಬ್ಬದ ಹುತಾತ್ಮ ಸರ್ದಾರ್ ಭಗತ್‌ಸಿಂಗರ ಹಿಂದೂಸ್ಥಾನ ಸೋಶಲಿಸ್ಟ್ ರಿಪಬ್ಲಿಕನ್ ಆರ್ಮಿ, ಸೂರ್ಯಸೇನರ ಚಿತ್ತಗಾಂಗಿನ ಇಂಡಿಯನ್ ರಿಪಬ್ಲಿಕನ್ ಆರ್ಮಿ, ಮುಂದೆ ಸುಭಾಷ್ ಚಂದ್ರಬೋಸ್ ಸ್ಥಾಪಿಸಿದ ಅಜಾದ್ ಹಿಂದ್ ಸೇನೆ. ರಾಷ್ಟ್ರೀಯ ಚಳುವಳಿಯ ಮುಖ್ಯಧಾರೆಯಿಂದ ಹೊರಇದ್ದುದು ಅಂತರಾಷ್ಟ್ರೀಯ ಮತ್ತು ರಾಷ್ಟ್ರದ ರಾಜಕೀಯದ ಬಗೆ ತಿಳುವಳಿಕೆ ಕಮ್ಮಿ ಇದ್ದುದು, ದುಡಿಯುವ ಜನರ ಸಂಘಟನೆಗಳ ಅನಿವಾರ್ಯತೆಯನ್ನು ಕಂಡುಕೊಳ್ಳದೆ ಇದ್ದುದು ಇವುಗಳ ಕೆಲವು ನ್ಯೂನ್ಯತೆಗಳು 1917 ರಲ್ಲಿ ಬರ್ಖತುಲ್ಲಾರ ಗುಂಪು ಮತ್ತು 1946 ರಲ್ಲಿ ಸುಭಾಷ್‌ರ ಅಜಾದ್ ಹಿಂದ್ ಸೇನೆ ಫ್ಯಾಸಿಸ್ಟ್ ಜರ್ಮನಿಯ ಸಹಾಯ ತೆಗೆದುಕೊಳ್ಳುವ ಮಟ್ಟಿಗೆ ರಾಷ್ಟ್ರೀಯ ಮುಖ್ಯ ಧಾರೆಯಿಂದ ಬೇರೆಯಾದದ್ದು ಕಾಂಗ್ರೆಸ್‌ನ ನಿರುತ್ಸಾಹಿ ಬೂರ್ಜ್ವಾ ನಾಯಕತ್ವದಿಂದ ಮತ್ತು ಪ್ರಬಲ ರಾಷ್ಟ್ರೀಯ ಐಕ್ಯರಂಗದ ಅಭಾವದಿಂದ ಈ ರಾಷ್ಟ್ರೀಯ ಐಕ್ಯರಂಗ ರಚನೆಯಾಗದಿದ್ದುದೇ ಭಾರತದ ರಾಷ್ಟ್ರೀಯ ಸಮಸ್ಯೆಗಳು ಅಧಿಕಾರದ ಹಸ್ತಾಂತರದೊಂದಿಗೆ ಪರಿಹಾರವಾಗದುದಕ್ಕೆ ಮುಖ್ಯ ಕಾರಣ.

ರಾಷ್ಟ್ರೀಯ ಚಳುವಳಿಯಲ್ಲಿ ಕಾಂಗ್ರೆಸ್‌ನ ಇನ್ನೊಂದು ನೀತಿ ರಾಷ್ಟ್ರೀಯ ಸಮಸ್ಯೆಗಳನ್ನು ಉಲ್ಬಣಗೊಳಿಸಲು ಕಾರಣವಾಗಿದೆ. ಅದು ಸ್ಥಳೀಯ ರಾಜರೊಂದಿಗೆ ರಾಜಿಮನೋಭಾವದಿಂದಾಗಿ ಅವರ ರಾಜ್ಯಗಳನ್ನು ಕಾಂಗ್ರೆಸ್ ತನ್ನ ರಾಷ್ಟ್ರೀಯ ಚಳುವಳಿಯ ಪರಿಧಿಯಿಂದ ಪೂರ್ತಿಯಾಗಿ ಹೊರಗಿಟ್ಟದ್ದು. ಅಂದು ಬ್ರಿಟೀಷ್ ಭಾರತ ಮತ್ತು ಇತರ ರಾಜ್ಯಗಳ ನಡುವೆ ರಾಜಕೀಯ, ಆರ್ಥಿಕ ಬೆಳವಣಿಗೆಯು ಪ್ರಾದೇಶಿಕ ವಿಷಮತೆಗೆ ಮುಖ್ಯ ಕಾರಣವಾಗಿದೆ.

ಈ ಹಿನ್ನೆಲೆಯಲ್ಲಿ ನಮ್ಮ ದೇಶದ ಬೂರ್ಜ್ವಾ ವರ್ಗ ಹೀಗೇಕೆ ಎಲ್ಲರೊಂದಿಗೆ ರಾಜಿಮನೋಭಾವ ತೋರುತ್ತದೆ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಮತ್ತು ಪಾಳೆಯಗಾರಿ ವಿರೋಧಿ ಪ್ರಜಾಸತ್ತಾತ್ಮಕ.ಕ್ರಾಂತಿಯ ನಾಯಕತ್ವ ವಹಿಸಲು ಏಕೆ ವಿಫಲವಾಯಿತು ಎಂದು ವಿಚಾರ ಮಾಡುವುದು ಅಗತ್ಯ. ಯೂರೋಪಿನಲ್ಲಿ 18 ನೇ ಶತಮಾನದಲ್ಲಿ ಆಗ ತಾನೆ ಬೆಳೆಯುತ್ತಿದ್ದ ಬೂರ್ಜ್ವಾವರ್ಗಕ್ಕೆ ತನ್ನ ಹೊಸ ಆರ್ಥಿಕ ವ್ಯವಸ್ಥೆಯ ಉತ್ಪನ್ನವಾದ ಸರಕುಗಳಿಗೆ ಏಕೀಕೃತ ವಿಶಾಲ ಮಾರುಕಟ್ಟೆ, ಈ ಮಾರುಕಟ್ಟೆ ಇರುವ ಪ್ರದೇಶದಲ್ಲಿ ಏಕೀಕೃತ ರಾಜಕೀಯ ವ್ಯವಸ್ಥೆ ಮತ್ತು ಸುಲಭ ಸಂಪರ್ಕ ಮತ್ತು ವಿನಿಮಯಕ್ಕಾಗಿ ಸಾಮಾನ್ಯ ಭಾಷೆ ಇವು ಅನಿವಾರ್ಯವಾದ್ದರಿಂದ ಪಾಳೆಯಗಾರಿ-ವಿರೋಧಿ ಬೂರ್ಜ್ವಾ ಪ್ರಜಾಸತ್ತಾತ್ಮಕ ಕ್ರಾಂತಿಯ ನಾಯಕತ್ವ ವಹಿಸಿತು. ಆದರೆ ಕೊನೆಯ ಮತ್ತು ಅತ್ಯಂತ ಪ್ರತಿಗಾಮಿ ಘಟ್ಟವಾದ ಸಾಮ್ರಾಜ್ಯಶಾಹಿಯಲ್ಲಿ ಬೆಳೆಯಲು ಪ್ರಯತ್ನಿಸುತ್ತಿರುವ ನಮ್ಮ ದೇಶದ ಸ್ಥಳೀಯ ಬಂಡವಾಳಶಾಹಿ ವರ್ಗ ತನ್ನ ಬೆಳವಣಿಗೆಗಾಗಿಯೇ ಸಾಮ್ರಾಜ್ಯಶಾಹಿಯೊಂದಿಗೆ ರಾಜಿಮನೋಭಾವ ತೋರುತ್ತದೆ. ಜಗತ್ತಿನಲ್ಲಿ ಸಾಮ್ರಾಜ್ಯಶಾಹಿ-ವಿರೋಧಿ ಸಮಾಜವಾದಿ ಶಕ್ತಿಗಳ(ರಷ್ಯಾ, ಚೀನಾ ಮುಂತಾದ) ಮಿಲಿಟರಿ, ಆರ್ಥಿಕ ಬಲದಿಂದಾಗಿ, ಸಮಾಜವಾದಿ ಕ್ರಾಂತಿಗೆ ಪರವಾಗಿರುವ ಅಂತರ್‌ರಾಷ್ಟ್ರೀಯ ರಾಜಕೀಯ ಪರಿಸ್ಥಿತಿಯಲ್ಲಿ ಪೂರ್ಣ ಪ್ರಮಾಣದ ಪಾಳೆಯಗಾರಿ-ವಿರೋಧಿ, ಸಾಮ್ರಾಜ್ಯಶಾಹಿ-ವಿರೋಧಿ ಪ್ರಜಾಸತ್ತಾತ್ಮಕ ಕ್ರಾಂತಿ, ಕೂಡಲೇ ಸಹಜವಾದಿ ಕ್ರಾಂತಿ ಸಹ ಆಗಿಬಿಡುವ ಸಾಧ್ಯತೆಯಿಂದಾಗಿ ಮತ್ತು ಇದು ಅವರ ಹಿತಾಸಕ್ತಿಗಳಿಗೆ ವಿರುದ್ಧವಾಗಿರುವುದರಿಂದ ಭಾರತೀಯ ಬಂಡವಾಳಶಾಹಿ ವರ್ಗ ಪ್ರಜಾಸತ್ತಾತ್ಮಕ ಕ್ರಾಂತಿಯ ನಾಯಕತ್ವ ವಹಿಸುವುದು ಸಾಧ್ಯವಿಲ್ಲ.

ಪಾಳೆಯಗಾರಿ-ವಿರೋಧಿ, ಸಾಮ್ರಾಜ್ಯಶಾಹಿ ವಿರೋಧಿ, ಗುತ್ತೇದಾರಿ-ವಿರೋಧಿ "ಜನತಾ ಪ್ರಜಾಸತ್ತಾತ್ಮಕ ಕ್ರಾಂತಿ"ಯನ್ನು ನಡೆಸಲು ಕಾರ್ಮಿಕ ವರ್ಗದ ನಾಯಕತ್ವದಲ್ಲಿರುವ, ಮತ್ತು ರೈತ-ಕಾರ್ಮಿಕ ವರ್ಗಗಳ ಸುಭದ್ರ ವರ್ಗ ಸಖ್ಯದ ಮೇಲೆ ಆಧಾರಿತ "ಜನತಾ ಪ್ರಜಾಸತ್ತಾತ್ಮಕ ರಂಗ"ಕ್ಕೆ ಮಾತ್ರ ಸಾಧ್ಯ. ತಿಲಕರ ಬಂಧನದ ವಿರುದ್ಧ ರಾಜಕೀಯ ಮುಷ್ಕರದಿಂದ ಹಿಡಿದು, 1929 ರ ಶೋಲಾಪುರ ಕಮ್ಯೂನ್, 1946 ಮಹಾಮುಷ್ಕರಗಳು ಇವುಗಳನ್ನು ನಡೆಸಿದ ಕಾರ್ಮಿಕ ವರ್ಗದ; ಮೋಪ್ಲಾ ದಂಗೆ, ಪನ್ನಪುರ-ವಯಲಾರ ಹೋರಾಟ, ಚೌರಿಚೌರಾ, ತೆಲಂಗಾಣಾಗಳಲ್ಲಿ ಶೌರ್ಯದಿಂದ ಹೋರಾಡಿದ ರೈತವರ್ಗದ; ಮತ್ತು 1929ರ ರಾಯಲ್ ಗಢವಾಲಿ ದಂಗೆ, 1946ರ ರಾಯಲ್ ಇಂಡಿಯನ್ ನೇವಿಯ ಮುಂತಾದ ದಂಗೆ ಬ್ರಿಟಿಷರನ್ನು ನಡುಗಿಸಿದ ಸೈನಿಕರ; ನಿರ್ಣಾಯಕ ಹೋರಾಟಗಳೇ ಭಾರತೀಯ ಬೂರ್ಜ್ವಾವರ್ಗಕ್ಕೆ ಅಧಿಕಾರದ ಹಸ್ತಾಂತರವಾಗಲು ಮುಖ್ಯ ಕಾರಣ, ಆದ್ದರಿಂದ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಪೂರ್ಣಗೊಳಿಸುವುದು ಸಹ ಈ ವರ್ಗಗಳಿಗೆ ಮಾತ್ರ ಸಾಧ್ಯ.

ಭಾರತದ ರಾಷ್ಟ್ರೀಯ ಸಮಸ್ಯೆಯ ವಿಶಿಷ್ಟತೆ ಎಂದರೆ ಬಹುರಾಷ್ಟ್ರೀಯತೆ, ಇಲ್ಲಿ ರಾಷ್ಟ್ರೀಯತೆ ಎಂದರೆ ಚಾರಿತ್ರಿಕವಾಗಿ ತನ್ನದೇ ಆದ ಪ್ರದೇಶದಲ್ಲಿ ಭಾಷೆ, ಸಂಸ್ಕೃತಿ ಹಾಗೂ ಆರ್ಥಿಕ ಬಾಂಧವ್ಯಗಳನ್ನು ಬೆಳೆಸಿಕೊಂಡು ಬಂದ ಜನಸಮೂಹ, ಕರ್ನಾಟಕ, ಆಂಧ್ರ, ಬಂಗಾಲಿ, ಪಂಜಾಬಿ, ಇತ್ಯಾದಿ ಪ್ರಮುಖ ರಾಷ್ಟ್ರೀಯತೆಗಳು. ಇವಲ್ಲದೆ ಮಣಿಪುರಿ, ತ್ರಿಪುರಿ ಮುಂತಾದವು ಅಲ್ಪಸಂಖ್ಯಾತ ರಾಷ್ಟ್ರೀಯತೆಗಳು. ಭಾಷಾವಾರು ಪ್ರಾಂತ್ಯದ ರಚನೆ ರಾಷ್ಟ್ರೀಯ ಸಮಸ್ಯೆಯನ್ನು ಪರಿಹರಿಸುವತ್ತ ದೊಡ್ಡ ಹೆಜ್ಜೆ. ಆದರೆ ಇದನ್ನು ಕೇಂದ್ರದಲ್ಲಿರುವ ಗುತ್ತೇದಾರಿ ಬಂಡವಾಳಶಾಹಿ ವರ್ಗದ ಸಮರ್ಥಕರು ವಿವಿಧ ರಾಜ್ಯಗಳ ಪ್ರಜಾಸತ್ತಾತ್ಮಕ ಪಾತ್ರವನ್ನು ನಗಣ್ಯಮಾಡುವ ಮೂಲಕ ಬುಡಮೇಲು ಮಾಡಿದ್ದಾರೆ. ದೊಡ್ಡ ಗುತ್ತೇದಾರಿ-ಬಂಡವಾಳಶಾಹಿ ವರ್ಗ ಮತ್ತು ನೌಕರಶಾಹಿಯಲ್ಲ ಅದರ ಸಮರ್ಥಕರು ತಮ್ಮ ವರ್ಗ ಹಿತ್ತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಮತ್ತು ಪ್ರತಿಯೊಂದು ರಾಷ್ಟ್ರೀಯತೆಗೂ ತನ್ನ ಆರ್ಥಿಕ ಸಾಂಸ್ಕೃತಿಕ ಬೆಳವಣಿಗೆ ಮಾಡಿಕೊಳ್ಳಲು ಇರುವ ಹಕ್ಕು ಕಸಿದುಕೊಳ್ಳಲು "ರಾಷ್ಟ್ರೀಯ ಭಾವೈಕ್ಯತೆ" "ರಾಷ್ಟ್ರಭಾಷೆ" ಮುಂತಾದ ಘೋಷಣೆಗಳನ್ನು ಹಾಕುತ್ತಾರೆ. ಇನ್ನೊಂದು ಕಡೆ ಬೆಳೆಯುತ್ತಿರುವ ಸಣ್ಣ ಬಂಡವಾಳಶಾಹಿಗಳು ಭದ್ರವಾಗಿ ಬೇರೂರಿರುವ ದೊಡ್ಡ ಬಂಡವಾಳಶಾಹಿ ವರ್ಗದ ಒಂದು ಸ್ತರದೊಂದಿಗೆ ಘರ್ಷಣೆಗಳಲ್ಲಿ ತಮಗೆ ಸಹಾಯವಾಗುವಂತೆ ತಮ್ಮ ರಾಷ್ಟ್ರೀಯತೆ ಅಥವಾ ಜಾತೀಯ ಭಾವನೆಗಳನ್ನು ಕೆರಳಿಸುತ್ತವೆ. ಇವೆರಡರ ಪರಿಣಾಮ ಒಂದೇ- ಎಲ್ಲಾ ರಾಷ್ಟ್ರೀಯತೆಗಳ ದುಡಿಯುವ ಜನರ ಐಕ್ಯತೆ ಮುರಿಯುವುದು.

ಆದ್ದರಿಂದ ದುಡಿಯುವ ವರ್ಗಗಳ ಪಕ್ಷವಾದ ಭಾರತೀಯ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) "ಜನತಾ ಪ್ರಜಾಸತ್ತಾತ್ಮಕ ಕ್ರಾಂತಿ"ಯ ಮುಖ್ಯ ಅಂಗವಾಗಿರುವ ರಾಷ್ಟ್ರೀಯ ಸಮಸ್ಯೆಯ ಸರಿಯಾದ ಪರಿಹಾರಕ್ಕೆ ತನ್ನ ಕಾರ್ಯಕ್ರಮದಲ್ಲಿ ಈ ಕೆಳಗಿನ ಸಾಮಾನ್ಯ ಸೂಚನೆಗಳನ್ನು ನೀಡಿದೆ.

1. ಭಾರತದ ಒಕ್ಕೂಟ ಪ್ರಜಾಸತ್ತಾತ್ಮಕ ಕೇಂದ್ರವಾದದ ಮೇಲೆ ಆಧಾರಿತವಾದ ಫೆಡರೇಷನ್ ಆಗಿರಬೇಕು. ಎಲ್ಲಾ ರಾಜ್ಯಗಳಿಗೆ ನಿಜವಾದ ಸ್ವಾಯತ್ತತೆ ಮತ್ತು ಸಮನಾದ ಅಧಿಕಾರವಿರಬೇಕು.

2. ಪ್ರಭುತ್ವ ಶಕ್ತಿಯ ಎಲ್ಲಾ ಅಂಗಗಳು ಜನತೆಯಿಂದ ನೇರವಾದ, ಸಮಾನವಾದ, ಸಾರ್ವತ್ರಿಕವಾದ ಮತ್ತು 18 ವರ್ಷಗಳ ಮೇಲಿನ ವಯಸ್ಕರ ಮತದಾನದಿಂದ ಚುನಾಯಿತವಾಗಬೇಕು.

3. ಎಲ್ಲಾ ರಾಷ್ಟ್ರ ಭಾಷೆಗಳು ಸಮಾನವಾಗಿರಬೇಕು. ಹಿಂದಿಯನ್ನು ಅಧಿಕೃತ ಭಾಷೆಯಾಗಿ ಉಳಿದ ರಾಷ್ಟ್ರೀಯತೆಗಳ ಮೇಲಿ ಹೇರಬಾರದು. ವಿವಿಧ ರಾಷ್ಟ್ರೀಯತೆಗಳ ಜನರ ಆರ್ಥಿಕ, ಸಾಮಾಜಿಕ ಬೌದ್ಧಿಕ ಸಂಪರ್ಕದಿಂದ ಸ್ವಾಭಾವಿಕವಾಗಿ ಬೆಳೆದು ಬರುವ ಸಂಪರ್ಕ ಭಾಷೆಯನ್ನು ಅಂಗೀಕರಿಸಬೇಕು.

4 ಆರ್ಥಿಕವಾಗಿ ಹಿಂದುಳಿದ ರಾಜ್ಯ, ಪ್ರದೇಶಗಳಿಗೆ ವಿಶೇಷ ಸಹಾಯದಿಂದ ಮತ್ತು ಸಹಕಾರದ ಬೆಳವಣಿಗೆಯಿಂದ ಭಾರತದ ಐಕ್ಯವನ್ನು ಸಾಧಿಸಬೇಕು.

5. ಎಲ್ಲಾ ತರದ ನಾಗರಿಕ ಸ್ವಾತಂತ್ರ್ಯಗಳು ಪ್ರಜಾಸತ್ತಾತ್ಮಕ ಹಕ್ಕುಗಳು ಸಿಗಬೇಕು. ಎಲ್ಲಾ ತರದ ಸಾಮಾಜಿಕ ದಮನ ಕೊನೆಗಾಣಿಸಬೇಕು. ಪರಿಶಿಷ್ಟ ಜಾತಿ, ಮತ್ತು ಹಿಂದುಳಿದ ಜಾತಿಗಳಿಗೆ ವಿಶೇಷ ಸವಲತ್ತು ಒದಗಿಸಬೇಕು.

6 ಲಿಂಗ ಆಧಾರಿತ ಅಸಮಾನತೆ ನಿವಾರಿಸಬೇಕು. ಧಾರ್ಮಿಕ ಅಲ್ಪಸಂಖ್ಯಾತರಿಗೆ ರಕ್ಷಣೆ ಒದಗಿಸಬೇಕು.

7. ನಿಜವಾಗಿಯೂ ಸಾಮ್ರಾಜ್ಯ-ಶಾಹಿ ವಿರೋಧಿಯಾಗಿರುವ ವಿದೇಶಿ ನೀತಿ ಅನುಸರಿಸಬೇಕು. ಕಾಮನ್‌ವೆಲ್ತ್‌ನಿಂದ ಭಾರತ ಹೊರಬರಬೇಕು. ಭಾರತದ ಹಿತಾಸಕ್ತಿ ಮತ್ತು ಪ್ರತಿಷ್ಟೆಗೆ ವಿರುದ್ಧವಾಗಿರುವ ವಿದೇಶಗಳ ಜತೆಗಿರುವ ಎಲ್ಲಾ ಒಪ್ಪಂದಗಳನ್ನು ಕೊನೆಗಾಣಿಸಬೇಕು.

[ಮುಗಿಯಿತು]

ಕೇರಳದಲ್ಲಿ ಪಂಚಾಯತು ಚುನಾವಣೆ ಮಾರ್ಕ್ಸಿಸ್ಟ್ ಅಭ್ಯರ್ಥಿ ಅವಿರೋಧ ಆಯ್ಕೆ

ಮಂಜೇಶ್ವರ ಬ್ಲೋಕ್ ರೈತ ಸಂಘದ ಅಧ್ಯಕ್ಷರೂ, ಮಾರ್ಕ್ಸಿಸ್ಟ್ ಮುಂದಾಳು ಆಗಿರುವ ಕಾಮ್ರೇಡ್ ಕೆ. ಪಿ. ಮದನ ಮೇಸ್ತರ್‌ರವರು ಕಾಸರಗೋಡು ತಾಲೂಕು ಎಣ್ಮಕಜೆ ಪಂಚಾಯತಿಗೆ ಅವಿರೋಧ ಆಯ್ಕೆಯಾಗಿದ್ದಾರೆ. 16 ವರ್ಷಗಳ ಬಳಿಕ ಇದೀಗ ಸೆಪ್ಟಂಬರ್ 18 ರಂದು ಕೇರಳದಲ್ಲಿ ನಡೆಯಲಿರುವ ಪಂಚಾಯತು ಚುನಾವಣೆಯು ರಾಜ್ಯದ ರಾಜಕೀಯ ಭವಿಷ್ಯವನ್ನು ನಿರ್ಧರಿಸಲಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡ ಮತ್ತು ಪ್ರಜಾಪ್ರಭುತ್ವ ಪಕ್ಷಗಳ ರಂಗವು ಚುನಾವಣೆಯಲ್ಲಿ ಉತ್ತಮ ಆಶಾಭಾವವನ್ನು ಹೊಂದಿರುತ್ತದೆ.

○

ಓಂಕಾರ್‌ರವರ ಹತ್ಯೆಗೆ ಪ್ರಯತ್ನ

ಆಂಧ್ರ ಪ್ರದೇಶದ ಸಿ. ಪಿ. ಐ. (ಎಂ) ಶಾಸಕ, ಹಾಗೂ ಪಾರ್ಟಿಯ ನಾಯಕರಾಗಿರುವ ಓಂಕಾರ್‌ರವರು ಆಗಸ್ಟ್ 15ರಂದು ರಾತ್ರಿ ಬಹಿರಂಗ ಸಭೆಯನ್ನು ಮುಗಿಸಿಕೊಂಡು ತನ್ನ ಸ್ನೇಹಿತನ ಮನೆಗೆ ಊಟಕ್ಕೆಂದು ನಡೆದುಕೊಂಡು ಹೋಗುತ್ತಿರುವಾಗ ನಕ್ಸಲೀಯರು ಅವರ ಮೇಲೆ ದಾಳಿಮಾಡಿ ಚಾಕುವಿನಿಂದ ತಿವಿದಾಗ 3 ಇಂಚಿಗಿಂತ ಹೆಚ್ಚಿಗೆ ಗಾಯವಾಗಿದ್ದು ಧಾರಾಕಾರವಾಗಿ ರಕ್ತ ಹರಿಯಿತು. ಕೊಲೆಗೇಡಿಗಳು ತಪ್ಪಿಸಿಕೊಂಡಿದ್ದಾರೆ.

ಇದಕ್ಕಿಂತ ಮೊದಲೇ ಅವರ ಮೇಲೆ ನಕ್ಸಲೀಯರು ಬಾಂಬನ್ನು ಎಸೆದಿದ್ದು ಅದು ಸಿಡಿಯದೇ ಅವರ ಜೀವ ಉಳಿದಿತ್ತು. ಇದಕ್ಕೆಲ್ಲ ಕಾರಣರಾಗಿರುವ ನಕ್ಸಲೀಯರಿಗೆ ಪರೋಕ್ಷವಾಗಿ ಚೆನ್ನಾರೆಡ್ಡಿಯ ಬೆಂಬಲವಿರುವುದು ಸ್ಪಷ್ಟವಾಗುತ್ತದೆ. ಇದರ ಬಗ್ಗೆ ಪೋಲೀಸರಿಗೆ ದೂರುಗಳು ಹೋಗಿದ್ದರೂ ಇದುವರೆಗೂ ಯಾರನ್ನೂ ಬಂಧಿಸಿಲ್ಲದಿರುವುದು ಶೋಚನೀಯ.

○

ಬಂಟ್ವಾಳದಲ್ಲಿ ರೈತಕಾರ್ಮಿಕರ ಧರಣಿ

ದ. ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ರೈತರು ತಮ್ಮ ಅನೇಕ ಬೇಡಿಕೆಗಳ ಈಡೇರಿಕೆಗಾಗಿ ಆಗಸ್ಟ್ 6 ರಂದು ತಾಲ್ಲೂಕು ಕಚೇರಿಯ ಮುಂದೆ ಧರಣಿ ಮುಷ್ಕರ ನಡೆಸಿದರು. ನೆರೆಸಾಲಗಳ ಸಂಪೂರ್ಣ ಮಾಫಿ, ರೈತರಿಗೆ ಪರಿಹಾರವಿಲ್ಲದೆ ಪಟ್ಟೆ ನೀಡಿಕೆ, ಸಾಲ ವಸೂಲಿಗಾಗಿ ಮಾಡುವ ಜಪ್ತಿಗಳನ್ನು ನಿಲ್ಲಿಸುವುದು ಮುಂತಾದುವುಗಳ ಬಗ್ಗೆ ರೈತರು ಸರ್ಕಾರವನ್ನು ಒತ್ತಾಯಿಸಿ, ಪ್ರಚಂಡ ಮೆರವಣಿಗೆ ನಡೆಸಿದರು.

ರೈತ ಮುಂದಾಳುಗಳಾದ ಕಾಂ. ಹೂವಯ್ಯ ಬಂಗೇರ, ಜನಾರ್ಧನ ನಾಯಕ್, ಪಿ. ರಾಮಚಂದ್ರರಾವ್, ಬಿ. ವಿಷ್ಣುಮೂರ್ತಿ, ಕೆ. ವಿ. ರಾವ್ ಮುಂತಾದವರು ತಾಲ್ಲೂಕು ತಹಸೀಲ್ದಾರರನ್ನು ಕಂಡು, ಗ್ರಾಮಲೆಕ್ಕಿಗರು ಮೊದಲಾದ ರೆವೆನ್ಯೂ ಅಧಿಕಾರಿಗಳಿಂದ ರೈತರಿಗೆ ಆಗುತ್ತಿರುವ ತೊಂದರೆಗಳನ್ನು ವಿವರಿಸಿ, ಸಾವಿರಾರು ಮಂದಿ ಸಹಿಮಾಡಿದ ಮನವಿ ಪತ್ರವನ್ನು ಸಲ್ಲಿಸಿದರು. ತಹಸೀಲ್ದಾರರು ಮಾಮೂಲಿ ನೆವಗಳನ್ನು ಹೇಳಿದಾಗ ಪ್ರತಿಭಟನಕಾರರು ಘೋಷಣೆಗಳನ್ನು ಕೂಗಿ ಅವರ ಕಚೇರಿಯ ಬಾಗಿಲನ್ನು ತಡೆದು ನಿಂತರು. ಬೇರೆ ದಾರಿ ಇಲ್ಲದೆ ತಹಸೀಲ್ದಾರರು ನೆರೆಪರಿಹಾರ ಸಾಲಗಳ ವಸೂಲಿಯನ್ನು ಕೂಡಲೆ ಕೈಬಿಡುವುದಾಗಿ, ಸರ್ಕಾರಿ ಭೂಮಿಯ ಆಕ್ರಮಣಕಾರರಿಗೆ ಒಂದು ವರ್ಷದೊಳಗೆ 'ಡಿ' ನೋಟೀಸ್ ಜಾರಿಮಾಡುವುದಾಗಿ, ಬರಹದ ಮೂಲಕ ಆಶ್ವಾಸನೆ ಕೊಟ್ಟರು.

ಬಳಿಕ ಸೇರಿದ ಸಾರ್ವಜನಿಕ ಸಭೆಯ ಅಧ್ಯಕ್ಷತೆಯನ್ನು ಕಾಂ. ಹೂವಯ್ಯ ಬಂಗೇರ ವಹಿಸಿದ್ದರು. ಕಾಂ. ಕೆ. ವಿ. ರಾವ್, ಕಾಂ. ರಾಮಚಂದ್ರ ರಾವ್, ಇವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

●

ಲೇಬರ್ ಕಮೀಷನರಿಗೆ ದುಡಿಯುವ ಮಹಿಳೆಯರ ಮನವಿ

ಕರ್ನಾಟಕದಲ್ಲಿ ಐದುಲಕ್ಷಕ್ಕೂ ಹೆಚ್ಚು ಬೀಡಿಕಟ್ಟುವ ಕಾರ್ಮಿಕರಿದ್ದಾರೆ. ಇವರಲ್ಲಿ ಬಹುಪಾಲು ಮಹಿಳೆಯರು. ಬೀಡಿಕಾರ್ಮಿಕರ ಸಾಮಾನ್ಯ ಸಮಸ್ಯೆಗಳಲ್ಲದೆ ಮಹಿಳೆಯರಿಗೇ ವಿಶಿಷ್ಟವಾದ ಕೆಲವು ಸಮಸ್ಯೆಗಳಿವೆ. ಇವನ್ನು ಕರ್ನಾಟಕ ರಾಜ್ಯ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಇತ್ತೀಚೆಗೆ ಅಧ್ಯಯನ ಮಾಡಿತು.

ಮಹಿಳಾ ಬೀಡಿಕಾರ್ಮಿಕರು ದಿನವಿಡೀ ದುಡಿದರೂ ಅವರಿಗೆ ಸಿಗುವುದು ಮೂರು ಅಥವಾ ನಾಲ್ಕು ರೂಪಾಯಿಗಳು. ಇದಲ್ಲದೆ ಕೆಲಸಕ್ಕೆ ಸೇರುವಾಗ ನೀಡುವ ಪಾಸ್‌ಬುಕ್ ಅನ್ನು ಇವರ ಹೆಸರಿನಲ್ಲಿ ಕೊಡದೆ ಇವರ ಮಗನ ಅಥವಾ ಗಂಡನ ಹೆಸರಿನಲ್ಲಿ ಕೊಟ್ಟಿದ್ದಾರೆ. ಮಹಿಳೆಯರಿಗೆ ಕೊಡಬೇಕಾದ ಹೆರಿಗೆಭತ್ತೆ, ಹೆರಿಗೆರಜೆ ಸೌಲಭ್ಯದಿಂದ ಇವರನ್ನು ವಂಚಿಸಲು ಮಾಲೀಕರು ಹೂಡಿರುವ ಉಪಾಯ ಇದು, 1961 ರಲ್ಲೇ ಜಾರಿಗೆ ಬಂದ ಹೆರಿಗೆ ಭತ್ತೆಯ ಕಾನೂನು ಎಲ್ಲಿದೆ ?

ಬೆಳಿಗ್ಗೆಯಿಂದ ರಾತ್ರಿಯವರೆಗೆ ಬೀಡಿ ಕಟ್ಟುವವರು, ಕಂಟ್ರಾಕ್ಟರರ ಬಳಿ ಹೋಗಿ ಅದನ್ನು ಕೊಟ್ಟು ಬರುವವರು ಮಹಿಳೆಯರು. ಆದರೆ ಪಾಸ್ ಬುಕ್‌ನಲ್ಲಿ ಅವರ ಹೆಸರಿಲ್ಲ ಭಾವಚಿತ್ರವಿಲ್ಲ. ಬೋನಸ್ ಪಡೆಯಲು ದೂರದೂರಿನ ಮಗ ಅಥವಾ ಗಂಡ ಬರಬೇಕು. ಕೆಲಸ ಮಾಡುವವರು ಹೆಂಗಸರಾದರೆ ಅನೇಕ ಗಂಡಸರು ಬೋನಸ್ಸಿನ ದುರುಪಯೋಗ ಪಡೆಯುವುದೂ ಉಂಟು. ಇವೆಲ್ಲದರ ಬಗ್ಗೆ ಸಮನ್ವಯ ಸಮಿತಿ ಪರಿಶೀಲನೆ ನಡೆಸಿ, ಈ ಸಮಸ್ಯೆಗಳ ನಿವಾರಣೆಗೆ ಸರ್ಕಾರವನ್ನು ಒತ್ತಾಯಿಸಿದೆ. ಸಮಿತಿಯ ಪರವಾಗಿ ಎಸ್. ಮಾಲತಿ, ಗಾಯಿತ್ರಿದೇವಿ, ಆರ್. ಸುಧಾ, ಬೀಬಿಜಾನ್, ಜೀನತ್ ಉನ್ನೀಸಾ, ಮಹಬೂಬಿ ಇವರು ಆಗಸ್ಟ್ 16 ರಂದು ಲೇಬರ್ ಕಮೀಷನರನ್ನು ಭೇಟಿಮಾಡಿ ಮನವಿ ಸಲ್ಲಿಸಿದರು. ಅವರು ಒಂದು ತಿಂಗಳೊಳಗಾಗಿ ಸೂಕ್ತಕ್ರಮ ಕೈಗೊಳ್ಳುತ್ತೆವೆಂದು ಭರವಸೆ ನೀಡಿದ್ದಾರೆ. ○

ಮತೀಯ ಸೌಹಾರ್ದತೆ ಸಪ್ತಾಹ

ದೆಹಲಿಯಲ್ಲಿ ಸಭೆ ಸೇರಿದ್ದ ಭಾರತ ವಿದ್ಯಾರ್ಥಿ ಫೆಡರೇಶನ್ನಿನ ಕೇಂದ್ರ ಕಾರ್ಯಕಾರಿ ಸಮಿತಿಯು ಆಗಸ್ಟ್ 8 ರಿಂದ 15 ರ ವರೆಗೆ "ಮತೀಯ ಸೌಹಾರ್ದತೆ ಮತ್ತು ಪ್ರಜಾಸತ್ತೆಯನ್ನು ಉಳಿಸಿ" ಸಪ್ತಾಹವನ್ನು ಆಚರಿಸಲು ಕರೆಕೊಟ್ಟಿತ್ತು. ಇದರ ಅಂಗವಾಗಿ ದ. ಕ. ಜಿಲ್ಲೆ ಎಸ್. ಎಫ್. ಐ. ಸಮಿತಿಯು ತೊಕ್ಕೊಟು ನೇತಾಜಿ ಗೇಮ್ಸ್ ಕ್ಲಬ್ ಆವರಣದಲ್ಲಿ ಈ ಕಾರ್ಯಕ್ರಮವನ್ನು ಆಚರಿಸಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಹರಿಶ್ಚಂದ್ರರಾವ್ ವಹಿಸಿದ್ದರು. ರಾಜ್ಯಸಮಿತಿ ಸದಸ್ಯರಾದ ಕಾಂ. ಶ್ರೀನಿವಾಸ್, ಜಿಲ್ಲಾ ಸಮಿತಿ ಸದಸ್ಯರಾದ ಕಾಂ. ಮೋಹನ ಮತ್ತು ಉಮೇಶ್ ಅವರು ಎಸ್. ಎಫ್. ಐ. ನ ಗುರಿ ಮತ್ತು ಬೇಡಿಕೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳುವಳಿಕೆ ನೀಡಿದರು. ಜಿಲ್ಲಾ ಸಮಿತಿ ಸದಸ್ಯರಾದ ಕಾಂ. ರಾಘವ ಅವರು ಮಾತನಾಡಿ, ತಿಪಟೂರಿನಲ್ಲಿ ಕಾಂ. ಚೆನ್ನಬಸವಣ್ಣನವರ ಮೇಲೆ ಆದ ಹಲ್ಲೆಯನ್ನು ಖಂಡಿಸಿದರು. ನಂತರ ಈ ಹಲ್ಲೆಯ ಖಂಡನೆಯ ಬಗ್ಗೆ ಮಂಡಿಸಿದ ಠರಾವು ಸೇರಿದಂತೆ ಅನೇಕ ಠರಾವುಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

○

'ನೋವು-ಘರ್ಷಣೆ-ಗಾಯ ಇರುವೆಡೆ ನಿಜ ಕಲೆ ಇದೆ'

'ನೋವು, ಘರ್ಷಣೆ ಮತ್ತು ಗಾಯಗಳು ಇರುವಂತಹ ಸ್ಥಳದಲ್ಲೇ ನಿಜವಾದ ಕಲೆ ಇರುವುದು'

ಈ ಮಾತುಗಳನ್ನು ಹೇಳಿದವರು ಪ್ರಸಿದ್ಧ ದಲಿತ ಸಾಹಿತಿ ದೇವನೂರ ಮಹಾದೇವ ಅವರು. ಶ್ರೀಯುತರು ಇತ್ತೀಚೆಗೆ ಬೆಂಗಳೂರಿನಲ್ಲಿ ದಲಿತ ಕವಿ ಇಂದೂಧರ ಹೊನ್ನಾಪುರ ಅವರು ಬರೆದ 'ಬಂಡಾಯ' ಕವನ ಸಂಕಲನವನ್ನು ಬಿಡುಗಡೆ ಮಾಡಿ ಮಾತನಾಡುತ್ತಿದ್ದರು.

ಜನತೆ ಬಂದಂತಹ ಬದುಕುತ್ತಿರುವಂತಹ ನೋವು-ಘರ್ಷಣೆ-ಗಾಯಗಳ ಸ್ಥಳವನ್ನು ಸಾಹಿತಿಗಳು ಮತ್ತು ವಿಮರ್ಶಕರ ಒಂದು ಸವಾಲನ್ನಾಗಿ ಸ್ವೀಕರಿಸಿ ನಿಜ ಕಲೆಯನ್ನು ಮೂಡಿಸಿ ಎಂದು ಮನವಿ ಮಾಡಿದರು.

ಪ್ರೀತಿ-ಪ್ರೇಮಗಳಿಂದ ತುಂಬಿ ತುಳುಕುತ್ತಿದ್ದ ಈ ಸರಳ ಸಮಾರಂಭಕ್ಕೆಯುವ ಸಾಹಿತಿಗಳು-ವಿಮರ್ಶಕರು-ಸಾಹಿತ್ಯ ಪ್ರೇಮಿಗಳು ಕಿಕ್ಕಿರಿದು ನೆರೆದಿದ್ದರು.

'ಬಂಡಾಯ' ಕೃತಿಯನ್ನು ಕುರಿತು ಮಾತನಾಡಿದ ಲೇಖಕ ಹಾಗೂ ವಿಮರ್ಶಕ ಡಿ. ಆರ್. ನಾಗರಾಜ್ ಅವರು ಹೊಸ ಕಾವ್ಯ ಮತ್ತು ಹೊಸ ಸಾಹಿತ್ಯ ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರವಾಗಿ ವಿವರಿಸಿದರು.

ವಾಸ್ತವತೆಯನ್ನು ಪ್ರತಿಬಿಂಬಿಸದ ಸಾಹಿತ್ಯ ಮತ್ತು ಕಾವ್ಯವನ್ನು ವಿಕೃತ ಕೃಷಿ ಎಂದು ಕರೆದ ನಾಗರಾಜ್ ಅವರು, ಆರೋಗ್ಯವಂತ ವ್ಯಕ್ತಿ ಇಂತಹ ವಿಕೃತ ಸಾಹಿತ್ಯ-ಕಾವ್ಯದಿಂದ ಓಡಿಹೋಗಲು ಬಯಸುತ್ತಾನೆ ಎಂದರು. ಕುರೂಪ-ಸುಳ್ಳು-ವಿಕೃತ ಅಂಶಗಳಿಂದ ತುಂಬಿ ತುಳುಕುತ್ತಿರುವ ಕಾವ್ಯ-ಸಾಹಿತ್ಯ ಮತ್ತು ನಾಟಕಗಳಿಗೆ ನಮ್ಮ ಸಮಾಜದಲ್ಲಿರುವ ಯಜಮಾನ ಸಂಸ್ಕೃತಿ ಕಾರಣವೆಂದು ಗುರುತಿಸಿದರು. ಇದರಿಂದ ತಪ್ಪಿಸಿಕೊಳ್ಳುವುದು ಸೃಜನಾತ್ಮಕ ಅನ್ವೇಷಣೆಯಿಂದ ಮಾತ್ರ ಸಾಧ್ಯ ಎಂದೂ ಸಹ ಅವರು ಅಭಿಪ್ರಾಯಪಟ್ಟರು. ವ್ಯವಸ್ಥೆಯ ವಿರುದ್ಧ ಇರುವ ರಾಜಕೀಯ ಸಿಟ್ಟು ಮಾತ್ರ ಲೇಖಕನನ್ನು ಮೇಲಕ್ಕೊಯ್ಯಬಹುದು ಎಂದು ಸ್ಪಷ್ಟವಾಗಿ ಹೇಳಿದ ಡಿ. ಆರ್. ಅವರು ಹೊಸ ಲೇಖಕರಲ್ಲಿ, ವಾಮಪಂಥಿಯ ಲೇಖಕರಲ್ಲಿ ಕಲಾತ್ಮಕ ಅಂಶ ಇರೋಲ್ಲ-ಅವರು ಬರೀ ಕೂಗಾಡುತ್ತಾರೆ-ಚೀರಾಡುತ್ತಾರೆ ಎಂಬ ಕೆಲವರ ಅಭಿಪ್ರಾಯವನ್ನು 'ಮೂಲತಃ ಕೆಟ್ಟ ಸೌಂದರ್ಯಾತ್ಮಕ ಧೋರಣೆ' ಎಂದು ಕರೆದರು. ರಾಜಕೀಯ ಪ್ರಜ್ಞೆಯ ಮಿತಿ ಕಾವ್ಯದ ಮಿತಿಯೂ ಕೂಡ ಆಗಿದೆ. ತಕ್ಷಣತೆ ಮತ್ತು ಶಾಶ್ವತೆ ನಡುವೆ ಲೇಖಕ ಸಂಬಂಧ ಕಂಡುಕೊಂಡು ಸಾರ್ವತ್ರಿಕ ಮುಖಿಯಾಗಬೇಕು. ಹೀಗೆ ಆದಾಗಲೇ ಶ್ರೇಷ್ಠ ಕಾವ್ಯದ ರಚನೆ ಸಾಧ್ಯ ಎಂದು ಪ್ರಖ್ಯಾತ ವಾಮಪಂಥೀಯ ಕವಿ ಪಾಬ್ಲೊ ನೆರೂದನನ್ನು ಉದಾಹರಿಸಿದರು.

ಇಂಡಿಯಾದ ಪಾತಾಪಿಸಂಸ್ಕೃತಿಬಗ್ಗೆ ಎಚ್ಚರದಮಾತುಗಳನ್ನಾಡಿದ ನಾಗರಾಜ್ ಅವರು ಎಲ್ಲ ಸಮಾಜವಾದಿ ಲೇಖಕರಿಗೆ ಅನುಭಾವಿಕ ತೀವ್ರತೆಯ ಸಾಧ್ಯತೆ ಇರಬೇಕು ಎಂದರು. ತೆಳು ರಾಜಕೀಯವನ್ನೇ ವಸ್ತುವನ್ನಾಗಿ ಮುಂದುವರಿಸಿದರೆ ಜನವಿರೋಧಿ ಸ್ಥಿತಿಗೆ ಬರುವ ಅಪಾಯವನ್ನೂ ಅವರು ಮನದಟ್ಟು ಮಾಡಿಕೊಟ್ಟರು. ಈ ದೇಶದ ಪಾತಾಪಿ ಸಂಸ್ಕೃತಿ ಎಲ್ಲವನ್ನೂ ಅರಗಿಸಿಕೊಂಡುಬಿಡುತ್ತೆ ಎಂದು ಹೇಳಿದ ಡಿ. ಆರ್. ನೋವು-ಸಿಟ್ಟು ಬತ್ತಿಹೋಗದಂತೆ ಲೇಖಕ ತನ್ನ ರಾಜಕೀಯ ಪ್ರಜ್ಞೆಯನ್ನು ವಿಸ್ತರಿಸಿಕೊಳ್ಳಬೇಕಾಗುತ್ತದೆ ಎಂದರು. ಬದ್ಧ ಲೇಖಕನಿಗೆ ಸೀಮಿತತೆ ಇರುವುದರಿಂದ ಕ್ಷಣಿಕ ಮತ್ತು ಶಾಶ್ವತ ಶಕ್ತಿಗಳನ್ನು ಗುರುತಿಸಿಕೊಂಡು ಮುನ್ನಡೆಯಿರಿ ಎಂದು ಯುವ ಬಂಡಾಯ ಬರಹಗಾರರ ಬೆನ್ನು ತಟ್ಟಿದರು.

ದಲಿತರ ಬಗ್ಗೆ ಅಪಾರ ಪ್ರೇಮದ ಕಾವ್ಯವಾದ ಇಂದೂಧರ ಅವರ ಕವನ ಸಂಕಲನಕ್ಕೆ ಚಾರಿತ್ರಿಕ ಮಹತ್ವ ಇದೆ ಎಂದು ಹೇಳಿದ ನಾಗರಾಜ್ ಅವರು ಕೃತಿಕಾರರನ್ನು ಅಭಿನಂದಿಸಿದರು.

ನಾವೆಲ್ಲ ದಲಿತರ ಬಗ್ಗೆ ಬರೆಯುತ್ತೇವೆ-ಮಾತನಾಡುತ್ತೇವೆ, ಆದರೆ ಅವರು ಇರುವ ಸ್ಥಳವಾದ ಹಳ್ಳಿಗಳಿಗೆ ಹೋಗುತ್ತಿಲ್ಲ ಎಂದು ವ್ಯಥೆಪಟ್ಟ ಯುವ ವಕೀಲ ಎಂ. ಪಿ. ಪ್ರಕಾಶ್ (ಹಡಗಲಿ) ಅವರು ಸಮಾರಂಭದಲ್ಲಿ ಮಾತನಾಡಿ ದಲಿತರಿರುವಲ್ಲಿಗೆ ಬನ್ನಿ-ಬಂದು ನಿಜವಾದ ಕೆಲಸಮಾಡಿ ಎಂದು ಒತ್ತಾಯಿಸಿದರು.

ಪ್ರಾರಂಭದಲ್ಲಿ ಮಹಾಬಲೇಶ್ವರ ಕಾಟ್ರಹಳ್ಳಿ ಸ್ವಾಗತಿಸಿದರು. ಉಲ್ಲಾಸ್ ವಂದಿಸಿದರು. ●

ಮೈಸೂರು ಹೋಟೆಲ್ ಕಾರ್ಮಿಕರ ಮೆರವಣಿಗೆ

ಮೈಸೂರು ನಗರದಹೋಟೆಲ್ ಕಾರ್ಮಿಕರು ಆಗಸ್ಟ್ 15ರಂದು ತಮ್ಮ ಬೇಡಿಕೆಗಳ ಈಡೇರಿಕೆಗೆ ಮೆರವಣಿಗೆ ನಡೆಸಿದರು. ದಿನಕ್ಕೆ ಎಂಟುಗಂಟೆ ಕೆಲಸ, ರಜಾ ಸೌಲಭ್ಯ, ಕನಿಷ್ಠ ವೇತನ ಇತ್ಯಾದಿ ಬೇಡಿಕೆಗಳ ಈಡೇರಿಕೆಗೆ ಅವರು ಹೋರಾಟ ಮಾಡುತ್ತಿದ್ದಾರೆ. ಮೆರವಣಿಗೆಯ ನೇತೃತ್ವವನ್ನು ಮೈಸೂರು ಜಿಲ್ಲಾ ಹೋಟೆಲ್ ಕೆಲಸಗಾರರ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಎಂ. ಶೇಕರ್ ಅವರು ವಹಿಸಿದ್ದರು. ○

ಕಾಂ. ಕೃಷ್ಣಪಿಳ್ಳೆ

[3ನೇ ಪುಟದಿಂದ]

ಒಬ್ಬ ಕಾರ್ಮಿಕನ ಮನೆಯಲ್ಲಿ ಪಾರ್ಟಿಯ ಚಟುವಟಿಕೆಯ ಬಗ್ಗೆ ಬರೆಯುತ್ತಿರುವಾಗ ಒಂದು ವಿಷ ಸರ್ಪ ಕಾಮ್ರೇಡನ್ನು ಕಚ್ಚಿತು. ತನ್ನ ಕೊನೆಯ ಉಸಿರು ಬಿಡುವಾಗ ಹೀಗೆಂದು ಬರೆದರು "ನನ್ನ ಕಣ್ಣಲ್ಲಿ ಕತ್ತಲೆ ಕವಿಯುತ್ತಿದೆ, ನನ್ನ ದೇಹ ಕುಸಿಯುತ್ತಿದೆ, ಏನು ಸಂಭವಿಸುತ್ತದೆ ಎಂಬುದು ನನಗೆ ಗೊತ್ತು ಕಾಮ್ರೇಡ್ಸ್ ಮುನ್ನಡೆಯಿರಿ".

ಕಾಂ. ಇ. ಎಂ. ಎಸ್‌ನ ಮಾತಿನಲ್ಲಿ ಹೇಳುವುದಾದರೆ ಕಾಂ. ಕೃಷ್ಣಪಿಳ್ಳೆ ಮರಣ ಹೊಂದಿ ಮೂವತ್ತೊಂದು ವರ್ಷವಾಯಿತು. ಈ ವರ್ಷಗಳಲ್ಲಿ ಕಮ್ಯುನಿಸ್ಟ್ ಚಳುವಳಿ ಅದ್ಭುತವಾಗಿ ಬೆಳೆದಿದೆ. ಅದೇ ಸಮಯದಲ್ಲಿ ಪರಿಷ್ಕರಣವಾದದಿಂದ ಕಮ್ಯುನಿಸ್ಟ್ ಚಳುವಳಿಯಲ್ಲಿ ಒಡಕುಂಟಾಗಿದೆ. ಆದರೂ ಇದನ್ನೆದುರಿಸಿ ನಮ್ಮ ಚಳುವಳಿ ಮುನ್ನಡೆಯುತ್ತಿದೆ. ಇದರಲ್ಲಿ ಭಾಗವಹಿಸುವ ಇಂದಿನ ಜನತೆ ಕಮ್ಯುನಿಸ್ಟ್ ಚಳುವಳಿಗೆ ಇಪ್ಪತ್ತು ವರ್ಷದ ಸತತವಾದ ಪ್ರಯತ್ನದಿಂದ, ದುಡಿದು ತಮ್ಮನ್ನೇ ಅರ್ಪಿಸಿದ ಕಾಂ. ಕೃಷ್ಣಪಿಳ್ಳೆಯವರ ಜೀವನಚರಿತ್ರೆ ಓದಬೇಕಾದದ್ದು ಅತ್ಯಗತ್ಯ. ಅವರು ನಮ್ಮನ್ನಗಲಿದರೂ. ಇಂದಿಗೂ ನಮ್ಮ ಜೊತೆಯಲ್ಲೇ ಜೀವಿಸುತ್ತಿದ್ದಾರೆ, ಎಂದೆಂದಿಗೂ ಜೀವಿಸುತ್ತಾರೆ. ಏಕೆಂದರೆ, ಅವರು ಜನತೆಗೆ ನೀಡಿರುವ ಮಹತ್ತರವಾದ ಸಂಘಟನೆ, ಕ್ರಾಂತಿಕಾರಿ ಚಳುವಳಿಗಳು ಎಂದಿಗೂ ನಶಿಸುವುದಿಲ್ಲ.

○

ಮುನ್ನೂರು ಯುವಕ ಮಂಡಲದ ಆಶ್ರಯದಲ್ಲಿ ಸ್ವಾತಂತ್ರ್ಯೋತ್ಸವ

ಮುನ್ನೂರು ಯುವಕ ಮಂಡಲ (ರಿ) ಕುತ್ತಾರ ಪದವು ಇದರ ಆಶ್ರಯದಲ್ಲಿ ತಾರೀಕು 15 ರಂದು ಸ್ವಾತಂತ್ರ್ಯೋತ್ಸವವು ಬಹು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಮಕ್ಕಳ ವರ್ಷದ ಪ್ರಯುಕ್ತ ಕುಮಾರ್ ಐದರ್ ಅವರು ಅಧ್ಯಕ್ಷರಾಗಿ ಆಗಮಿಸಿದ್ದು ಧ್ವಜವನ್ನು ಅರಳಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀಗಳಾದ ಆಲಿ ಸಾಹೇಬ್ ಮತ್ತು ಬಿ. ರಾಘವ ಬಂಗೇರ ಅವರು ದಯಮಾಡಿಸಿದ್ದರು. ಅಧ್ಯಕ್ಷರ ಹಾಗೂ ಅತಿಥಿಗಳ ಹಿತನುಡಿಗಳಾದ ಬಳಿಕ ಯುವಕ ಮಂಡಲದ ಹಾಗೂ ಸಾರ್ವಜನಿಕ, ಕಿರಿಯ ಹಾಗೂ ಹಿರಿಯ ಕ್ರಿಡಾಪ್ರೇಮಿಗಳಿಗೆ ಅನೇಕ ವಿಧದ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಹಾಗೂ ಸಾರ್ವಜನಿಕರಿಗೆ ಸಿಹಿತಿಂಡಿ ವಿತರಣೆ ಮಾಡುವುದರ ಮೂಲಕ ಸಮಾರಂಭವು ಯಶಸ್ವಿಯಾಗಿ ಸಮಾಪ್ತಿಯಾಯಿತು.

○

ಮಂಗಳೂರಿನಲ್ಲಿ ಬೀಡಿ ಕೆಲಸಗಾರರ ಸಭೆ

ಮಂಗಳೂರು ನಗರದ ಎಂಟನೆ ಡಿವಿಜನ್ನಿನ ಬೀಡಿಕೆಲಸಗಾರರ ಸಭೆಯು ಆಗಸ್ಟ್ 12 ರಂದು ಮಹಾನವಮಿ ಕಟ್ಟೆಯಲ್ಲಿರುವ ನೇಜ್ಸಿ ಯೂನಿಯನ್ ಕಚೇರಿಯಲ್ಲಿ ಜರುಗಿತು.

ಎಂಟನೇ ಡಿವಿಜನ್ ಸಮಿತಿಯ ಕಾರ್ಯದರ್ಶಿ ಕಾಂ. ಲೋಕಯ್ಯಶೆಟ್ಟಿ ಅವರು ಸಭೆ ಕರೆದ ಉದ್ದೇಶವನ್ನು ವಿವರಿಸಿದರು. ಬೀಡಿ ಕಂಟ್ರಾಕ್ಟ್ ದಾರರು ಮತ್ತು ಮಾಲೀಕರು ಕಾರ್ಮಿಕರನ್ನು ಶೋಷಿಸುತ್ತಿರುವುದನ್ನು ಕೂಲಂಕುಷವಾಗಿ ಚರ್ಚಿಸಿದ ನಂತರ, ಕಾರ್ಮಿಕರ ಸಂಘಟನೆಮಾಡಿ ಅವರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಅವರು ಹೋರಾಡುವಂತೆ ಮಾಡಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಇದರ ಅಂಗವಾಗಿ ಎಂಟನೇ ಡಿವಿಜನ್ ಪ್ರದೇಶದಲ್ಲಿ ಹತ್ತು ಪ್ರಾದೇಶಿಕ ಸಭೆಗಳನ್ನು ನಡೆಸಬೇಕೆಂದು ನಿರ್ಧರಿಸಲಾಯಿತು. ●

ಕೇರಳ ಸೋಶಿಯಲಿಸ್ಟ್ ಯುವಜನ ಫೆಡರೇಷನ್ ಸಭೆ

ಕೇರಳ ಸೋಶಿಯಲಿಸ್ಟ್ ಯುವಜನ ಫೆಡರೇಷನ್‌ನ ಸಭೆಯು ಆಗೋಸ್ತು 14 ರಂದು ಕಾಸರಗೋಡು ತಾಲೂಕು ಮೀಂಜ ಪಂಚಾಯತಿನ ಕಡಂಬಾರಿನಲ್ಲಿ ಜರಗಿತು. ಸಭೆಯ ಅಧ್ಯಕ್ಷತೆ ವಹಿಸಿದ್ದ ಮಂಜೇಶ್ವರದ ಯುವಜನ ಮುಂದಾಳು ಕಾಮ್ರೇಡ್ ನಾರಾಯಣ ಅಮೀನರು ರಾಜ್ಯದ ಹಾಗೂ ದೇಶದ ಇಂದಿನ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ, ಸಮಾಜದ ಪ್ರಾಮುಖ್ಯ ಅಂಗವಾದ ಯುವಜನರು ಸಂಘಟಿತರಾಗಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳಿದರು. 'ಐಕ್ಯರಂಗ' ಪತ್ರಿಕೆಗೆ ಚಂದಾದಾರರಾಗಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಕಾಂ. ರಾಮಣ್ಣನವರು ಸ್ವಾಗತಿಸಿದ್ದು, ಕಾಂ. ಅಬೂಬಕ್ಕರ್ ವಂದಿಸಿದರು.

○

ದಿಲ್ಲಿಯಲ್ಲಿ ಆಗಸ್ಟ್ ೧೧ ರಂದು

೫ ಲಕ್ಷ ಕಾರ್ಮಿಕರ ಭವ್ಯ ಹೋರಾಟ

ಕನಿಷ್ಟಕೂಲಿಯ ತಮ್ಮ ನ್ಯಾಯಬದ್ಧ ಬೇಡಿಕೆಯ ಈಡೇರಿಕೆಗಾಗಿ ದೇಶದ ರಾಜಧಾನಿಯ 5 ಲಕ್ಷ ಕಾರ್ಮಿಕರು ಆಗಸ್ಟ್ 11 ರಂದು ಒಂದು ದಿವಸದ ಸಾಂಕೇತಿಕ ಮುಷ್ಕರ ಆಚರಿಸಿದರು.

ದಿಲ್ಲಿಯ ಕೈಗಾರಿಕಾ ಪ್ರದೇಶಗಳಲ್ಲಿ ಅಂದು ಜನಜೀವನ ಸ್ಥಗಿತಗೊಂಡಿತ್ತು. ಕಾರ್ಮಿಕರು ನೂರಾರು ರ್‍ಯಾಲಿಗಳನ್ನು ಅಂದು ಏರ್ಪಡಿಸಿದ್ದರು. 350ರೂಗಳ ಕನಿಷ್ಟ ವೇತನ ಮತ್ತು 150 ರೂಗಳ ತುಟ್ಟಿಭತ್ಯೆ ಕೊಡಬೇಕೆಂಬ ಬೇಡಿಕೆಯ ಈಡೇರಿಕೆಗಾಗಿ ನೂರಾರು ಸಭೆ-ಸಮಾರಂಭ-ರ್‍ಯಾಲಿಗಳು ಅಂದು ದೆಹಲಿಯಲ್ಲಿ ಜರುಗಿದವು.

ಮುಷ್ಕರ ನಿರತವಾಗಿರುವ 24,000 ಗಿರಣಿ ಕಾರ್ಮಿಕರಿಗೆ, ಸ್ಥಳೀಯ ಸಂಸ್ಥೆಗಳ ನೌಕರರಿಗೆ, ಪತ್ರಿಕಾಲಯಗಳ ನೌಕರರ ಹೋರಾಟಕ್ಕೆ ಆಗಸ್ಟ್ 11ರ ಸಭೆ-ಸಮಾರಂಭ-ರ್‍ಯಾಲಿಗಳಲ್ಲಿ ಬೆಂಬಲ ವ್ಯಕ್ತಪಡಿಸಲಾಯಿತು.

ಕಳೆದ ಜುಲೈ 29 ರಂದು ದಿಲ್ಲಿಯಲ್ಲಿ ಸಮಾವೇಶಗೊಂಡಿದ್ದ ಸಿ.ಐ.ಟಿ.ಯು. ಐ.ಎನ್.ಟಿ.ಯು.ಸಿ.,ಎ.ಐ.ಟಿ.ಯು.ಸಿ., ಯು.ಟಿ.ಯು.ಸಿ, ಎಚ್.ಎಂ.ಎಸ್, ಮತ್ತು ಬಿ.ಎಂ.ಎಸ್, ಕಾರ್ಮಿಕ ಸಂಘಗಳ ಸಂಯುಕ್ತ ಅಧಿವೇಶನದಲ್ಲಿ ಒಂದು ದಿನದ ಮುಷ್ಕರವನ್ನು ಆಗಸ್ಟ್ 11 ರಂದು ಆಚರಿಸಬೇಕೆಂದು ಕರೆ ಕೊಡಲಾಗಿತ್ತು.

ಸಿ.ಪಿ.ಐ.(ಎಂ)ನ ದಿಲ್ಲಿ ರಾಜ್ಯ ಸಮಿತಿ ಹಾಗೂ ಸಿ.ಐ.ಟಿ.ಯು. ರಾಜ್ಯ ಸಮಿತಿ ಪ್ರತ್ಯೇಕ ಹೇಳಿಕೆಗಳನ್ನಿತ್ತು ದುಡಿಯುವ ಜನತೆಯ ನ್ಯಾಯಬದ್ಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಡಳಿತ ವರ್ಗಗಳನ್ನು ಮತ್ತು ಸರ್ಕಾರವನ್ನು ಒತ್ತಾಯಿಸಿವೆ. ಕಾರ್ಮಿಕರ ಹೋರಾಟದ ದಿನದಂದು ಬಂಧಿಸಲಾದ 300 ಜನ ಕಾರ್ಮಿಕರನ್ನು ಮತ್ತು ಅವರ ನಾಯಕರುಗಳನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕೆಂದೂ ಹೇಳಿಕೆಯಲ್ಲಿ ಒತ್ತಾಯಿಸಲಾಗಿದೆ. ಆಗಸ್ಟ್ 11ರ ಮುಷ್ಕರ ದಿಲ್ಲಿಯ ಚರಿತ್ರೆಯಲ್ಲಿ ಒಂದು ಹೊಸ ಅಧ್ಯಾಯವಾಗಿದೆ. ●

ಆಟೋರಿಕ್ಷಾ ಚಾಲಕರಿಂದ ಸಮಸ್ಯೆಗಳ ಚರ್ಚೆ

ಆಟೋರಿಕ್ಷಾ ಚಾಲಕರ ಸಂಘವು ಆಗಸ್ಟ್ 18 ರಂದು ಸಭೆ ಸೇರಿ ಚಾಲಕರು ಎದುರಿಸುತ್ತಿರುವ ಅನೇಕ ಸಮಸ್ಯೆಗಳ ಬಗ್ಗೆ ವಿವರವಾಗಿ ಚರ್ಚಿಸಿತು. ಬಿಡಿಭಾಗಗಳು ಮತ್ತು ಹೊಸ ಆಟೋರಿಕ್ಷಾಗಳ ದುಬಾರಿಬೆಲೆ, ಪೆಟ್ರೋಲ್ ಮತ್ತು ಎಣ್ಣೆಯ ಬೆಲೆ ಏರಿಕೆ ಇವುಗಳಿಂದ ಆಟೋ ಚಾಲಕರ ಜೀವನ ಕಷ್ಟಕರವಾಗಿದೆಯೆಂದು ಅಭಿಪ್ರಾಯ ಪಡಲಾಯಿತು.

ಒಂದು ರೂಪಾಯಿಗಳ ಕನಿಷ್ಠ ಬಾಡಿಗೆದರ ಮತ್ತು ಪ್ರತಿ ಕಿಲೋ ಮೀಟರಿಗೆ 60 ಪೈಸೆಗಳ ಹಾಗೆ ಈಗ ದರ ನಿಗದಿ ಮಾಡಲಾಗಿದೆ. ಆದರೆ ಚಾಲಕರಸಮಸ್ಯೆಗಳು ತೀವ್ರವಾಗಿರುವುದರಿಂದ ಇನ್ನು ಮುಂದೆ ಪ್ರತಿ ರೂಪಾಯಿಗೆ ಇಪ್ಪತ್ತೈದು ಪೈಸೆ ಹೆಚ್ಚಿಗೆ ನೀಡಲು ಜನತೆಗೆ ಮನವಿ ಮಾಡಲಾಗಿದೆ. ಆಗಸ್ಟ್ 79ರ ಒಳಗೆ ಸರ್ಕಾರವು ದರವನ್ನು ವಿಮರ್ಶಿಸದಿದ್ದರೆ ಸೆಪ್ಟೆಂಬರ್ ಒಂದರಂದು ಆಟೋ ಮುಷ್ಕರ ನಡೆಸುವುದೆಂದೂ ತೀರ್ಮಾನಿಸಲಾಗಿದೆ. ಈ ಬಗ್ಗೆ ಗೃಹ ವ್ಯವಹಾರಗಳ ಕಮೀಷನರ್ ಮತ್ತು ಕರ್ನಾಟಕ ಸರ್ಕಾರದ ಕಾರ್ಯದರ್ಶಿಯವರಿಗೆ ಮನವಿ ಸಲ್ಲಿಸಲಾಗಿದೆ. ●

ಅಖಿಲ ಭಾರತ ಬೀಡಿ ಮತ್ತು ಸಿಗಾರ್ ವರ್ಕರ್ಸ್ ಕೋ-ಆರ್ಡಿನೇಷನ್ ಕಮಿಟಿಯ ಸಭೆಯು ಬೆಂಗಳೂರಿನಲ್ಲಿ ಆಗಸ್ಟ್ **30, 31, 1979** ರಂದು ನಡೆಯುತ್ತದೆ.

ಕಾಂ. ಸಿ. ಕಣ್ಣನ್

ಕಾಂ. ವಿಮಲ ರಣಧೀವೆ

(ಅಖಿಲ ಭಾರತ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಸಂಚಾಲಕಿ)

ಮತ್ತು

ಕಾಂ. ಉಮಾನಾಥ್

(ಸಿ. ಐ. ಟಿ. ಯು. ಕಾರ್ಯಕಾರಿ ಸಮಿತಿಯ ಸದಸ್ಯರು)

ಮುಂತಾದವರು ಭಾಗವಹಿಸಲಿದ್ದಾರೆ.

ಕಾಂ. ಎಸ್. ಸೂರ್ಯನಾರಾಯಣರಾವ್
ಅಧ್ಯಕ್ಷ
ಸಿ. ಐ. ಟಿ. ಯು. ಕರ್ನಾಟಕ ರಾಜ್ಯ ಸಮಿತಿ.

ಕರ್ನಾಟಕ ಹತ್ತಿಗಿರಣಿ ಕಾರ್ಮಿಕರ ಕ್ರಿಯಾ ಸಮಿತಿ ರಚನೆ: ಸೆ. 1 ರಂದು 50 ಸಾವಿರ ಕಾರ್ಮಿಕರ ಸಾಂಕೇತಿಕ ಮುಷ್ಕರ

ಕರ್ನಾಟಕ ರಾಜ್ಯ ಹತ್ತಿಗಿರಣಿ ಕಾರ್ಮಿಕರ ಸಮಾವೇಶವು ಆಗಸ್ಟ್ 18 ಮತ್ತು 19 ರಂದು ದಾವಣಗೆರೆಯಲ್ಲಿ ಸೇರಿತ್ತು. ಸಮಾವೇಶಕ್ಕೆ ರಾಜ್ಯದ ಎಲ್ಲಾ ಭಾಗದ ಪ್ರತಿನಿಧಿಗಳೂ ಆಗಮಿಸಿದ್ದರು.

ಇತರೆ ರಾಜ್ಯಗಳಲ್ಲಿರುವ ಹತ್ತಿಗಿರಣಿ ಕಾರ್ಮಿಕರ ಮತ್ತು ರಾಜ್ಯದ ಹತ್ತಿಗಿರಣಿ ಕಾರ್ಮಿಕರ ನಡುವೆ ಇರುವ ವೇತನ ಅಂತರವನ್ನು ನಿವಾರಿಸಲು ಪ್ರಭಲವಾದ ಚಳುವಳಿಯನ್ನು ನಡೆಸಬೇಕೆಂದು ಸಮಾವೇಶದಲ್ಲಿ ತೀರ್ಮಾನಿಸಲಾಯಿತು.

ತಿಂಗಳಿಗೆ 125 ರೂಪಾಯಿಗಳ ತಾತ್ಕಾಲಿಕ ಪರಿಹಾರವನ್ನು ಕೊಡಬೇಕೆಂದು ಸಮ್ಮೇಳನವು ತನ್ನ ನಿರ್ಧಾರವನ್ನು ಪುನರುಚ್ಚರಿಸಿತು. 20 ರಿಂದ 35 ರೂ. ಗಳವರೆಗೆ ವೇತನ ಹೆಚ್ಚಳ ಮಾಡುವೆವೆಂಬ ಮಾಲೀಕ ವರ್ಗದ ಕೊಡುಗೆಯನ್ನು ಸಮ್ಮೇಳನವು ಒಕ್ಕೊರಲಿನಿಂದ ತಿರಸ್ಕರಿಸಿತು.

ಹತ್ತಿಗಿರಣಿ ಕಾರ್ಮಿಕರ ರಾಜ್ಯಮಟ್ಟ ಕ್ರಿಯಾಸಮಿತಿಯನ್ನು ಸಮ್ಮೇಳನದಲ್ಲಿ ಆಯ್ಕೆ ಮಾಡಲಾಯಿತು. ಎ. ಐ. ಟಿ. ಯು. ಸಿ. ಯ ಪಂಪಾಪತಿಯವರು ಅಧ್ಯಕ್ಷರಾಗಿಯೂ, ಸಿ. ಐ. ಟಿ. ಯು. ನ ಗಂಗಾಧರ ನಾಮೋಶಿಯವರು ಉಪಾಧ್ಯಕ್ಷರಾಗಿಯೂ ಆಯ್ಕೆಗೊಂಡರು. ಸಿ. ಐ. ಟಿ. ಯು. ನ ವಿ. ಜೆ. ಕೆ. ನಾಯರ್ ಮತ್ತು ಎ. ಐ. ಟಿ. ಯು. ಸಿ. ಯ ಸಿ. ಮುನಿರತ್ನಂ ಅವರು ಕಾರ್ಯದರ್ಶಿಗಳಾಗಿ ಆಯ್ಕೆಗೊಂಡರು.

ಹತ್ತಿಗಿರಣಿಗಳ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಯ ಒತ್ತಾಯಕ್ಕೆ ಸೆಪ್ಟೆಂಬರ್ 1 ರಂದು ಒಂದು ದಿವಸದ ಸಾಂಕೇತಿಕ ಮುಷ್ಕರ ಆಚರಿಸಬೇಕೆಂದು ಸಮ್ಮೇಳನದಲ್ಲಿ ಕರೆಕೊಡಲಾಯಿತು.

ಸಮ್ಮೇಳನದ ಕೊನೆಯ ದಿವಸ ಬೃಹತ್ ಮೆರವಣಿಗೆ ಹಾಗೂ ರ್‍ಯಾಲಿಯನ್ನು ಹತ್ತಿಗಿರಣಿ ಕಾರ್ಮಿಕರು ಏರ್ಪಡಿಸಿದ್ದರು. ಸಿ. ಐ. ಟಿ. ಯು. ನಾಯಕರುಗಳಾದ ಗಂಗಾಧರ ನಾಮೋಶಿ, ವಿ. ಜೆ. ಕೆ. ನಾಯರ್ ಅವರೂ ಸೇರಿದಂತೆ ಹಲವಾರು ಕಾರ್ಮಿಕ ನಾಯಕರು ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿದರು. ●

ಕಾಂ. ಕುಂಜಪ್ಪ ಮತ್ತು ಪ್ರಮಿತ ಕುಮಾರಿ ವಿವಾಹ

ದಿನಾಂಕ 22-8-79 ರಂದು ಬೆಳಗ್ಗೆ 10 ಗಂಟೆಗೆ ಬೆಂಗಳೂರಿನ ಟಿನ್ ಫ್ಯಾಕ್ಟರಿಯ ಬಳಿ ಇರುವ ಸಿ. ಐ. ಟಿ. ಯು. ಆಫೀಸಿನ ಹತ್ತಿರ ಕಾಂ.ಕುಂಜಪ್ಪ(ಹರ್ಬರ್ಟ್ಸ್ ಇಂಡಿಯಾ ಎಂಪ್ಲಾಯೀಸ್ ಯೂನಿಯನ್ ಪ್ರಧಾನ ಕಾರ್ಯದರ್ಶಿ)ರವರು ಪ್ರಮಿತ ಕುಮಾರಿಯೊಡನೆ ವಿವಾಹ ವಾದರು. ಕಾಂ.ಎಂ.ಕೆ ಭಟ್‌ರವರು ವಿವಾಹ ಸಮಾರಂಭವನ್ನು ನೆರವೇರಿಸಿದರು. ಕಾಂ ವಿ.ಜೆ ಕೆ.ನಾಯರ್, ಕಾಂ.ಎಸ್.ಸೂರ್ಯನಾರಾಯಣ ರಾವ್‌ರವರು ನೂತನ ವಧೂವರರಿಗೆ ಶುಭ ಕೋರಿದರು. ವಿವಾಹ ಸಮಾರಂಭ ಸಾಂಪ್ರದಾಯಿಕಕ್ಕೆ ವಿರುದ್ಧವಾಗಿ ಸರಳವಾಗಿ ನೆರವೇರಿತು.

ವಿವಾಹ ಸಮಾರಂಭದ ಸಮಯದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ನೂತನ ವಧೂವರರು 20 ರೂ. ಕಾಣಿಕೆ ಸಲ್ಲಿಸಿದರು.

ಧಾರವಾಡ ಪ್ಲೈವುಡ್ ಕಾರ್ಮಿಕರ ಮಹಾಸಭೆ

ಧಾರವಾಡ ಇಂಡಿಯನ್ ಪ್ಲೈವುಡ್ ಕಾರ್ಮಿಕ ಸಂಘದ ಮಹಾಸಭೆಯು ಇತ್ತೀಚೆಗೆ ಸೇರಿ ಈ ಕೆಳಗಿನ ಪದಾಧಿಕಾರಿಗಳನ್ನು ಆಯ್ಕೆ ಮಾಡಿತು. ಅಧ್ಯಕ್ಷ: ಕಾಂ. ಎಂ. ಕೆ. ದೇಶಪಾಂಡೆ; ಉಪಾಧ್ಯಕ್ಷರು: ಕಾಂ. ಎಂ. ಬಿ. ಕುಟ್ಟಿ; ಪ್ರಧಾನ ಕಾರ್ಯದರ್ಶಿ: ಕಾಂ.ಲೂಯಿಸ್ ಮೆಸ್ಕಾರನೀಸ್; ಜೊತೆ ಕಾರ್ಯದರ್ಶಿ: ಕಾಂ, ಎಸ್. ಜಿ. ಪಾಟೀಲ; ಖಜಾಂಚಿ: ಕಾಂ.ಎಂ.ಬಿ.ಸಿಂಧೆ.

ಇವರಲ್ಲದೆ, ಕಾಂ.ಎಸ್.ಆರ್.ಪರಪ್ಪನವರ, ಕಾಂ. ಪ್ರಭು ಮಾಚಾರ, ಕಾಂ.ದಶರಥಮಾಂಗಳೆ, ಕಾಂ.ಬಿ.ಎಚ್ ಗೇಜೇರಿ, ಕಾಂ. ಜಿ. ಆಯ್. ದಾಂಡೇವಾಲೆ ಮತ್ತು ಕಾಂ.ಎಂ ಬಿ.ರೆಡ್ಡಿ ಇವರುಗಳನ್ನೊಳಗೊಂಡ ಇಪ್ಪತ್ತು ಸದಸ್ಯರ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಕಾರ್ಮಿಕ ಸಚಿವರ ಮೇಲೆ ಒತ್ತಾಯ:

ಕಾರ್ಮಿಕರಹೋರಾಟ ಮತ್ತು ಒತ್ತಾಯಗಳ ಫಲವಾಗಿ ಸರಕಾರವು ಪ್ಲೈವುಡ್ ಕಾರ್ಮಿಕರಿಗೆ ಕನಿಷ್ಟ ವೇತನ ನಿಗದಿ ಮಾಡಿದ್ದರೂ, ಮಾಲಕವರ್ಗವು ಹೈಕೋರ್ಟಿಗೆ ರಿಟ್ ಮಾಡಿ ಇದು ಜಾರಿಯಾಗದಂತೆ ತಡೆಹಿಡಿದಿದೆ. ಇದರಿಂದ ಬಹಳ ಅಲ್ಪ ವೇತನ ದೊರೆವ ಪ್ಲೈವುಡ್ ಕಾರ್ಮಿಕರಿಗೆ ಬಹಳ ಕಷ್ಟವಾಗಿದೆ. ಈ ರಿಟ್ ತೀರ್ಮಾನವಾಗುವಂತೆ ಸರಕಾರ ಕ್ರಮ ತೆಗೆದುಕೊಳ್ಳುವುದರಲ್ಲಿ ನಿರ್ಲಕ್ಷ ತೋರಿಸುತ್ತಲಿದೆ. ಈ ಬಗ್ಗೆ ತಕ್ಷಣವೇ ಕ್ರಮ ತೆಗೆದುಕೊಂಡು, ಕಾರ್ಮಿಕರಿಗೆ ನಿಗದಿಯಾದ ಕನಿಷ್ಟ ವೇತನ ದೊರಕಿಸಿ ಕೊಡುವಂತೆ ಇಂಡಿಯನ್ ಪ್ಲೈವುಡ್ ಕಂಪನಿ, ಧಾರವಾಡ, ಇದರ ಕಾರ್ಮಿಕರು ಕಾರ್ಮಿಕ ಸಚಿವರನ್ನು ಒತ್ತಾಯಿಸಿದ್ದಾರೆ. ●

ದೊಡ್ಡಬಳ್ಳಾಪುರದಲ್ಲಿ ಎಸ್.ಎಫ್.ಐ. ಯಿಂದ ಕೋಮು ಮತ್ತು ಸರ್ವಾಧಿಕಾರ ವಿರೋಧ ಕಾರ್ಯಕ್ರಮ

ದೊಡ್ಡಬಳ್ಳಾಪುರದಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ ಆಶ್ರಯದಲ್ಲಿ ದಿನಾಂಕ 15-8-79 ನೇ ಬುಧವಾರ ದಂದು ಕೋಮುವಾದಿ ಮತ್ತು ಸರ್ವಾಧಿಕಾರಿ ವಿರೋಧಿ ದಿನಾಚರಣೆಯನ್ನು ಮತ್ತು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.

ಸ್ವಾತಂತ್ರ್ಯ ನಮಗೆ ದೊರೆಕಿದೆಯೆ? ಎಂಬ ವಿಷಯದ ಬಗ್ಗೆ, ಎಸ್. ಎಫ್. ಐ. ಯ ಕರ್ನಾಟಕ ರಾಜ್ಯದ ಕಾರ್ಯದರ್ಶಿಗಳಾದ ಕಾಂ. ಶಾಂತರೇಣುಕಾರಾಧ್ಯರವರು ಭಾಗವಹಿಸಿ, ಅವರು ಮೇಲ್ಕಂಡ ವಿಷಯದ ಬಗ್ಗೆ ಸುದೀರ್ಘ ಭಾಷಣವಿತ್ತರು. ಕಾಂ. ರಾಮಭದ್ರಯ್ಯ, ಕಾಂ. ಬಾಲಾಜಿ ಹಾಗೂ ಅನೇಕ ರೈತ ಕಾರ್ಮಿಕ ಕಾರ್ಯಕರ್ತರು ಮಾತನಾಡಿದರು.

ದೊಡ್ಡಬಳ್ಳಾಪುರ ಘಟಕದ ಅಧ್ಯಕ್ಷರಾದ ಕಾಂ. ಮಲ್ಲಿಕಾರ್ಜುನರವರು ಸಭೆಗೆ ಬಂದ ಸಂಗಾತಿಗಳನ್ನು ಪರಿಚಯ ಮಾಡಿಕೊಟ್ಟರು ಮತ್ತು ಕಾರ್ಯದರ್ಶಿಗಳಾದ ಕಾಂ. ಶ್ರೀನಿವಾಸ ರಾಘವನ್ ವಂದನಾರ್ಪಣೆಯನ್ನು ಮಾಡಿದರು.

●

ದಾಂಡೇಲಿಯಲ್ಲಿ ಫೆರ್ರೋ ಅಲಾಯ್ಸ್ ಕಾರ್ಮಿಕರ ಹೋರಾಟ

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿನ ಫೆರ್ರೋ ಅಲಾಯ್ಸ್ ಕಂಪೆನಿಯು ಸುಮಾರು ಒಂದು ತಿಂಗಳಿನಿಂದ ಲಾಕ್-ಔಟ್ ಆಗಿದೆ. ಬೆಳಗಾಮಿನ ಡೆಪ್ಯುಟಿ ಲೇಬರ್ ಕಮೀಷನರವರು ಮಾಲೀಕರು ಮತ್ತು ಕಾರ್ಮಿಕರ ಪ್ರತಿನಿಧಿಗಳ ಮಧ್ಯೆ ಮಾತುಕತೆನಡೆಸಿ, ಲಾಕ್-ಔಟ್‌ನ್ನು ಎತ್ತುವಂತೆ ಪ್ರಯತ್ನಿಸಿದರು. 21 - 8 - 1979 ಮತ್ತು 22-8-1979 ರಂದು ನಡೆದ ಮಾತುಕತೆಯಲ್ಲಿ ಮಾಲೀಕರು ಕೆಲವೊಂದು ಷರತ್ತುಗಳನ್ನು ಮುಂದಿಟ್ಟು ಲಾಕ್‌ಔಟ್‌ನ್ನು ತೆಗೆಯಲು ಒಪ್ಪುವುದಾಗಿ ಹೇಳಿದರು. ಮಾಲೀಕರು ಮೂರು ಹಂತಗಳಲ್ಲಿ ಲಾಕ್-ಔಟ್‌ನ್ನು ಎತ್ತುವುದಾಗಿಯೂ, ಷರತ್ತುಗಳನ್ನೊಳಗೊಂಡ ಕರಾರಿಗೆ ಪ್ರತಿಯೊಬ್ಬ ಕಾರ್ಮಿಕನೂ ರುಜು ಮಾಡಬೇಕೆಂದೂ ಹೇಳಿದರು.

ಮಾಲೀಕರು ಈ ರೀತಿ ಷರತ್ತುಗಳನ್ನು ಹಾಕಿ ಲಾಕ್-ಔಟ್ ಎತ್ತುವುದನ್ನು ಕಾರ್ಮಿಕ ಪ್ರತಿನಿಧಿಗಳು ಸಂಪೂರ್ಣ ವಿರೋಧಿಸಿದ್ದರಿಂದ ಮಾತುಕತೆಯು ವಿಫಲವಾಯಿತು. ಮೇನೇಜ್‌ಮೆಂಟಿನವರು ಕಾರ್ಮಿಕರ ಐಕ್ಯತೆಯನ್ನು ಮುರಿಯುವುದಕ್ಕೆ ಮಾಡಿದ ಕುತಂತ್ರಕ್ಕೆ ಕಾರ್ಮಿಕ ಪ್ರತಿನಿಧಿಗಳು ಬಲಿ ಬೀಳಲಿಲ್ಲ.

ಹಲವು ದಿನಗಳಿಂದ ಹೋರಾಟ ನಡೆಸುತ್ತಲಿರುವ ಕಾರ್ಮಿಕರು ಅನೇಕ ಕಷ್ಟಗಳನ್ನು ಎದುರಿಸುತ್ತಲಿರುವರು. ಈಗಂತೂ ಮಳೆಗಾಲವಾಗಿದ್ದು, ಇವರ ಪರಿಸ್ಥಿತಿಯು ತುಂಬಾ ಕಷ್ಟವಾಗಿದೆ. ನ್ಯಾಯ ಪಡೆಯುವುದಕ್ಕಾಗಿ ಇನ್ನೆಷ್ಟೊ ದಿನಗಳ ಹೋರಾಟವನ್ನು ನಡೆಸಬೇಕಾಗಿದೆ. ಫೆರ್ರೋ ಅಲಾಯ್ಸ್ ಕಾರ್ಮಿಕರ ಈ ಹೋರಾಟವನ್ನು ಬಲಗೊಳಿಸಿ, ಮುಂದುವರಿಯಲು ಸಹಾಯವಾಗಲು ಸಿ.ಐ.ಟಿ.ಯು.ವಿಗೆ ಸೇರಿದ ಎಲ್ಲ ಕಾರ್ಮಿಕ ಸಂಘಟನೆಗಳು ಸೌಹಾರ್ದ ಬೆಂಬಲವನ್ನೂ, ಆರ್ಥಿಕ ಸಹಾಯವನ್ನೂ ನೀಡಬೇಕೆಂದು ಕಾರ್ಮಿಕ ಸಂಘದ ಅಧ್ಯಕ್ಷರು ವಿನಂತಿಸಿದ್ದಾರೆ. ಮಾಲೀಕರ ದುರ್ನೀತಿಯ ವಿರುದ್ಧ ಹೋರಾಟಕ್ಕೆ ಎಲ್ಲರ ಸಹಕಾರವನ್ನೂ ಇವರು ಕೇಳಿರುವರು.

○

ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ಮಹಾಸಭೆ

ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ನಿನ 14ನೇ ವಾರ್ಷಿಕ ಮಹಾಸಭೆ ದಿನಾಂಕ 12-8-1979ನೇ ಭಾನುವಾರ ವಿರಾಜಪೇಟೆಯ ಮುನಿಸಿಪಲ್ ಹಾಲ್‌ನಲ್ಲಿ ನಡೆಯಿತು.

ಈ ಸಭೆಯಲ್ಲಿ ಕೊಡಗಿನ ಎಲ್ಲ ಕಡೆಗಳಿಂದಲೂ ಸುಮಾರು 200 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಎಂ. ಆರ್. ಲೂಯಿಸ್‌ರವರು ವಹಿಸಿದ್ದರು.

ಸಭೆಯು ಹೊಸ ಸಮಿತಿಯೊಂದನ್ನು ಆಯ್ಕೆಮಾಡಿತು. ಹೊಸ ಅಧ್ಯಕ್ಷರಾಗಿ ಕಾಂ. ಕೆ. ಟಿ. ಮುತ್ತಪ್ಪ, ಕಾರ್ಯದರ್ಶಿಯಾಗಿ ಕಾಂ. ಐ. ಆರ್. ಅಸ್ಸಣ್ಣ, ಸಹ ಕಾರ್ಯದರ್ಶಿಗಳಾಗಿ ಕಾಂ. ಉದಯ ಕುಮಾರ್, ಕಾಂ. ಲತೀಫ್ ಕುರಿಪ್ಪನ್ ಮತ್ತು ಕಾಂ. ಕುಟ್ಟಪ್ಪನ್, ಖಜಾಂಚಿಯಾಗಿ ಕಾಂ. ಲಾಜರ್ ಅವರು ಆಯ್ಕೆಯಾದರು.

ಸಭೆಯಲ್ಲಿ ಸಂಘಟನೆಯ ಬಗ್ಗೆ ವಿಮರ್ಶಾತ್ಮಕ ಚರ್ಚೆ ನಡೆದು, ಕೊಡಗಿನಲ್ಲಿ ಕಾರ್ಮಿಕ ಚಳುವಳಿಯನ್ನು ಬಲಿಷ್ಠಗೊಳಿಸುವುದು ಅಗತ್ಯ ಎಂಬ ತೀರ್ಮಾನದೊಂದಿಗೆ ಸಭೆ ಮುಕ್ತಾಯಗೊಂಡಿತು.

○

ಚಂದಾದಾರರ ಗಮನಕ್ಕೆ

ಐಕ್ಯರಂಗವು ಬೆಂಗಳೂರಿನಿಂದ ಪ್ರಕಟವಾಗಲು ಪ್ರಾರಂಭಿಸಿ ಈ ತಿಂಗಳ 15ಕ್ಕೆ ಆರು ತಿಂಗಳು ಕಳೆಯಿತು. ಅನೇಕ ಚಂದಾದಾರರು ತಮ್ಮ ಚಂದಾ ಸದಸ್ಯತ್ವವನ್ನು ನವೀಕರಿಸಿಲ್ಲ. ದಯವಿಟ್ಟು ಕೂಡಲೇ ಹಣ ಕಳಿಸಿ, ಚಂದಾ ಸದಸ್ಯತ್ವವನ್ನು ಮುಂದುವರಿಸಬೇಕಾಗಿ ಅರಿಕೆ. ಇಲ್ಲವಾದಲ್ಲಿ, ಪತ್ರಿಕೆಯನ್ನು ಹಣ ಕಳಿಸದ ಚಂದಾದಾರಿಗೆ ನಿಲ್ಲಿಸಲಾಗುವುದು.

ವ್ಯವಸ್ಥಾಪಕ.

ಮ್ಯಾನೇಜರ್, ಐಕ್ಯರಂಗ,
ಎಲ್ - 56, ಕೆ. ವಿ. ಟೆಂಪಲ್ ಸ್ಟ್ರೀಟ್
ಸುಲ್ತಾನ್ ಪೇಟೆ, ಬೆಂಗಳೂರು - 560053

ಚಂದಾ ವಿವರ

ಬಿಡಿಪ್ರತಿ	40 ಪೈಸೆ
6 ತಿಂಗಳಿಗೆ	10 ರೂ.
ಒಂದು ವರ್ಷಕ್ಕೆ	20 ರೂ.

ಸಂಪಾದಕೀಯ

[ಒಂದನೇ ಪುಟದಿಂದ]

ಬೇರೆ ಬೇರೆ ಪಕ್ಷಗಳು ಅಧಿಕಾರದಲ್ಲಿವೆ. ದೇಶದಲ್ಲಿ ಬಹು ಪಕ್ಷ ಪದ್ಧತಿಯು ಬೆಳೆದು ಬಂದಿದೆ.

ಈ ಪರಿಸ್ಥಿತಿಯಲ್ಲಿ ಮಧ್ಯಂತರ ಚುನಾವಣೆ ನಡೆದು ತಾತ್ಕಾಲಿಕ ಸ್ಥಿರತೆಯನ್ನು ತರುವುದು ಸಾಧ್ಯವಾಗಬಹುದಷ್ಟೆ. ಇಂದಿನ ಅಸ್ಥಿರತೆ, ರಾಜಕೀಯ ಗೊಂದಲಗಳಿಗೆ ಮೂಲ ಕಾರಣ ನಮ್ಮ ಆಳುವ ವರ್ಗಗಳು ಅನುಸರಿಸಿಕೊಂಡು ಬಂದಿರುವ ದಿವಾಳಿಕೋರ ಆರ್ಥಿಕ ನೀತಿಯೇ ಆಗಿದೆ. ದೇಶವನ್ನು ಬಂಡವಾಳಶಾಹಿಪಥದಲ್ಲಿ ಕೊಂಡೊಯ್ಯುವ ಈ ಆರ್ಥಿಕ ನೀತಿಗಿಂತ ತೀರಾ ಭಿನ್ನವಾದ, ಸಮಾಜವಾದದತ್ತ ಕೊಂಡೊಯ್ಯುವ ನೀತಿಯಿಂದಲೇ ಬಿಕ್ಕಟ್ಟಿನ ಪರಿಹಾರವು ಸಾಧ್ಯ. ಆಗಲೇ ನಿಜವಾದ ರಾಜಕೀಯ ಸ್ಥಿರತೆಯೂ ಸಾಧ್ಯ. ಸರ್ವಾಧಿಕಾರಿ ಮತ್ತು ಕೋಮುಶಕ್ತಿಗಳ ವಿರುದ್ಧ ವಿಶಾಲ ತಳಹದಿಯ ವೇದಿಕೆಯು ಬೆಳೆದು, ಮುಂಬರುವ ಮಧ್ಯಂತರ ಚುನಾವಣೆಯಲ್ಲಿ ಕೋಮುವಾದಿ ಮತ್ತು ಸರ್ವಾಧಿಕಾರಿ ಶಕ್ತಿಗಳ ಬಲವನ್ನು ಕುಗ್ಗಿಸುವುದೆಂದು ಆಶಿಸೋಣ.

●

ಪರಿಸರ

ಗಣೇಶನ ಹಬ್ಬದ ಸಮಯ. ಕಡಲೇಕಾಯಿ ಎಣ್ಣೆ, ಸಕ್ಕರೆಯ ಬೆಲೆ ಗಗನಕ್ಕೇರಿದೆ. ಸೀಮೆಎಣ್ಣೆ ಸಿಕ್ಕುತ್ತಿಲ್ಲ. ಗಣೇಶನಿಗೆ ಕಡುಬು ಹೇಗೆ ಮಾಡುವುದು.

—"ಪ್ರಜಾವಾಣಿ" ಯಲ್ಲಿ ವಾಚಕರೊಬ್ಬರ ಪತ್ರ

ಜನತಾ, ಕಾಂಗ್ರೆಸ್ (ಐ), ಜನತಾ (ಎಸ್) ಮತ್ತು ಕಾಂಗ್ರೆಸ್ ಪಕ್ಷದವರು ಪರಸ್ಪರ ಲೇವಡಿ ಮಾಡುತ್ತಿದ್ದರು. ಚರಣ್ ಸರ್ಕಾರದ ರಾಜೀನಾಮೆ ನಂತರ ಜನತಾಪಕ್ಷದವರು ಲೋಕಸಭೆಯ ಸೆಂಟ್ರಲ್ ಹಾಲ್‌ನಲ್ಲಿ ಎಲ್ಲರಿಗೂ ಸಿಹಿತಿಂಡಿ ಹಂಚುತ್ತಾ ಪರಸ್ಪರ ತಬ್ಬಿಕೊಂಡು ಆನಂದಿಸುತ್ತಿದ್ದರು.

—(ಆಗಸ್ಟ್ 20 ರಂದು ಲೋಕಸಭೆಯನ್ನು ವೀಕ್ಷಿಸಿ ಎಲ್ಲ ಪ್ರಮುಖ ಪತ್ರಿಕೆಗಳು ಮಾಡಿದ ವರದಿ)

ಅಧಿಕಾರಕ್ಕಾಗಿ ಎರಡು ಗುಂಪಿನ ನಡುವೆ ನಡೆದ ಹೋರಾಟ ಇದು.

—ಚರಣ್‌ಸರ್ಕಾರದ ರಾಜೀನಾಮೆ ಕುರಿತು ಸಿ. ಪಿ. ಐ. (ಎಂ) ನಾಯಕ **ಜ್ಯೋತಿರ್ಮಯಬಸು**

ಕೇರಳದಲ್ಲಿ ಕಮ್ಯುನಿಸ್ಟರು ಸಾಧಿಸಿರುವುದೇನೂ ಸಾಮಾನ್ಯವಲ್ಲ.

—ಕೇರಳ ಪ್ರವಾಸದ ನಂತರ ಖ್ಯಾತ ಸಾಹಿತಿ **ಪಿ. ಲಂಕೇಶ್**

ಚರಣ್ ಸರ್ಕಾರಕ್ಕೆ ಇಂದಿರಾಗಾಂಧಿಯದು ನಿಜಕ್ಕೂ ಷರತ್ತಿಲ್ಲದ ಬೆಂಬಲವಾಗಿರಲಿಲ್ಲವೆಂಬ ಅಂಶ ಈಗ ನಿಚ್ಚಳವಾಗಿದೆ.

"ಪ್ರಜಾವಾಣಿ"

ಮುಡಿಬಿಡುವುದು; ನಂತರ ದೇವಸ್ಥಾನಗಳಿಗೆ ಹೋಗಿ ಅದನ್ನು ಬೋಳಿಸುವುದು ಮುಂತಾದ ಮೂಢ ಸಂಪ್ರದಾಯಗಳನ್ನೆಲ್ಲಾ ರಾಜ್‌ನಾರಾಯಣ್ ಕಾರ್ಯತಃ ಮಾಡುತ್ತಿದ್ದಾರೆ. ಆದರೆ ಸಂಪ್ರದಾಯವಾದಿ ಮತ್ತು ಕೋಮುವಾದಿ ಆರ್. ಎಸ್. ಎಸ್. ವಿರುದ್ಧ ಹೋರಾಡುತ್ತೇನೆ ಎಂದು ಅಬ್ಬರಿಸುತ್ತಿದ್ದಾರೆ. ಇವನೊಬ್ಬ ಬೂಟಾಟಿಕೆಯ ಹೋರಾಟಗಾರ.

—ನ್ಯಾಯವಾದಿಗಳ ಸಂಘದಲ್ಲಿ ಮಾತನಾಡುತ್ತಿದ್ದ ಯುವ ವಕೀಲರು.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT